SUBHASHINI DEVI

# ಸುಭಾಷಿಣಿ ದೇವಿ

ಸುಭಾಷಿಣಿ ದೇವಿ
JNANA001750



ಎಲ್. ಶಿವಲಿಂಗಪ್ಪ

ಕರ್ನಾಟಕ ಲಲಿತಕಲಾ ಅಕಾಡೆಮಿ
KARNATAKA LALITHAKALA ACADEMY

# ಸುಭಾಷಿಣಿ ದೇವಿ
# SHUBHASHINI DEVI

ಎಲ್. ಶಿವಲಿಂಗಪ್ಪ

ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು -560 002
(ದೂರವಾಣಿ ಸಂಖ್ಯೆ: 080-22480297)

**SHUBHASHINI DEVI** : A biography by **L. Shivalingappa** Published by **V.N.Mallikarjuna Swamy,** Registrar, Karnataka Lalithakala Academy, Kannada Bhavana, J.C.Road, Bengaluru-560 002. Ph: 080-22480297

| | | |
|---|---|---|
| Edition | : | 2007 |
| Pages | : | viii + 40 + 20 |
| Copies | : | 1000 |
| Price | : | Rs. 50.00 |

ಹಕ್ಕುಗಳು : ಕಾಯ್ದಿರಿಸಿದೆ

| | | |
|---|---|---|
| ಮುದ್ರಣ | : | ೨೦೦೭ |
| ಪುಟಗಳು | : | ೮ + ೪೦ + ೨೦ |
| ಪ್ರತಿಗಳು | : | ೧೦೦೦ |
| ಬೆಲೆ | : | ರೂ. ೫೦.೦೦ |

ಪ್ರಕಾಶಕರು :
ವಿ.ಎನ್. ಮಲ್ಲಿಕಾರ್ಜುನಸ್ವಾಮಿ
ರಿಜಿಸ್ಟ್ರಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ,
ಬೆಂಗಳೂರು-೫೬೦ ೦೦೨.

ಮುದ್ರಕರು :
ರಶ್ಮಿ ಪ್ರಿಂಟರ್ಸ್
ನಂ12ಬಿ, ಮೊದಲನೇ ಕ್ರಾಸ್
ಕಲಾಸಿಪಾಳ್ಯ, ಹೊಸ ಬಡಾವಣೆ
ಬೆಂಗಳೂರು-560 002.
9901916581.

# ಅಧ್ಯಕ್ಷರ ನುಡಿ

ಕರ್ನಾಟಕ ಲಲಿತಕಲಾ ಅಕಾಡೆಮಿಯು ಕಳೆದ ನಲವತ್ತುಮೂರು ವರ್ಷಗಳಿಂದ ಲಲಿತ ಕಲೆಗೆ ಸಂಬಂಧಿಸಿದ ಅನೇಕ ಗ್ರಂಥಗಳನ್ನು ಪ್ರಕಟಿಸುತ್ತಾ ಬಂದಿದೆ. ಈ ಎಲ್ಲಾ ಗ್ರಂಥಗಳೂ ಕರ್ನಾಟಕದ ಕಲಾಸಕ್ತರ ಹಾಗೂ ಕಲಾವಿದರ ಮೆಚ್ಚುಗೆ ಗಳಿಸಿರುತ್ತವೆ. ಈ ಕಲಾ ಸಾಹಿತ್ಯ ಪ್ರಕಟಣೆಯ ಜೊತೆಗೆ ಕರ್ನಾಟಕದ ಚಿತ್ರಕಲಾ ಕ್ಷೇತ್ರಕ್ಕೆ ಅಪಾರ ಸೇವೆ ಸಲ್ಲಿಸಿದ ಅನೇಕ ಹಿರಿಯ ಕಲಾವಿದರ ಸಾಧನೆಗಳೊಂದಿಗೆ ಅವರ ಸಮಗ್ರ ಪರಿಚಯವನ್ನು ನೀಡುವ ಕಲಾವಿದರ ಮಾಲೆ ಪುಸ್ತಕಗಳನ್ನೂ ಅಕಾಡೆಮಿಯು ಪ್ರಕಟಿಸುತ್ತ ಬಂದಿದೆ. ಈ ಕಲಾವಿದರ ಮಾಲೆಯು ಆಯಾ ಕಲಾವಿದರ ಕಾಲಘಟ್ಟದಲ್ಲಿ ಬೆಳೆದು ಬಂದ ಕರ್ನಾಟಕದ ಕಲಾ ಇತಿಹಾಸವನ್ನೂ ಪರಿಚಯಿಸುತ್ತದೆ. ಕಲಾವಿದರ ಪರಿಚಯದ ಪುಸ್ತಕವನ್ನು ಕನ್ನಡ ಭಾಷೆಯಲ್ಲಿ ಅಲ್ಲದೇ ಇಂಗ್ಲೀಷ್ ಭಾಷೆಗೂ ಅನುವಾದಿಸಿ ಪ್ರಕಟಿಸಲಾಗುತ್ತದೆ. ಈ ಮೂಲಕ ನಮ್ಮ ಕಲಾವಿದರನ್ನೂ ಅವರ ಸಾಧನೆಯನ್ನೂ ಹೊರ ರಾಜ್ಯದ ಓದುಗರಿಗೆ ಪರಿಚಯಿಸಲಾಗುತ್ತದೆ.

ಈ ಹಿನ್ನಲೆಯಲ್ಲಿ ಪ್ರಸ್ತುತ ಪ್ರಕಟಿತ **'ಸುಭಾಷಿಣಿ ದೇವಿ'** ಪುಸ್ತಕವು ಅವರ ಜೀವನ ಮತ್ತು ಸಾಧನೆಗಳನ್ನು ಪರಿಚಯಿಸುತ್ತದೆ. ಈ ಪುಸ್ತಕದ ಲೇಖಕರೂ ಸ್ವತಃ ಕಲಾವಿದರಾಗಿದ್ದು ಪ್ರಸ್ತುತ ಕಲಾವಿದೆ ಜೀವನ ಮತ್ತು ಸಾಧನೆಗಳನ್ನು ಅರಿತವರಾಗಿದ್ದರಿಂದ ಸಮಗ್ರ ಪರಿಚಯದ ಈ ಪುಸ್ತಕವು ಓದುಗರ ಗಮನ ಸೆಳೆಯುತ್ತದೆಂದು ಭಾವಿಸಲಾಗಿದೆ.

ಈ ಮೊದಲು ಕಿರು ಅಳತೆಯಲ್ಲಿ ಪ್ರಕಟವಾಗುತ್ತಿದ್ದ ಕಲಾವಿದರ ಪರಿಚಯದ ಪುಸ್ತಕಗಳನ್ನು ಈಗ ದೊಡ್ಡ ಅಳತೆಯಲ್ಲಿ ಸಿದ್ಧಪಡಿಸಿ ಓದುಗರ ಕೈಗಿತ್ತಿದ್ದೇವೆ.

ಎಂದಿನಂತೆ ಕಲಾಸಕ್ತರು, ಕಲಾವಿದರು, ಕಲಾ ಇತಿಹಾಸ ಪ್ರೇಮಿಗಳು ಈ ಪುಸ್ತಕಗಳನ್ನು ಸ್ವಾಗತಿಸುತ್ತಾರೆಂದು ಆಶಿಸಲಾಗಿದೆ.

ಈ ಪುಸ್ತಕವನ್ನು ಮುದ್ರಿಸಿದ **ರಶ್ಮಿ ಪ್ರಿಂಟರ್ಸ್** ಅವರಿಗೂ ಪ್ರಕಟಿಸಿದ ಕರ್ನಾಟಕ ಲಲಿತಕಲಾ ಅಕಾಡೆಮಿಯ ರಿಜಿಸ್ಟ್ರಾರ್ **ಶ್ರೀ ವಿ.ಎನ್.ಮಲ್ಲಿಕಾರ್ಜುನಸ್ವಾಮಿ** ಅವರಿಗೂ ಅಕಾಡೆಮಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಬೆಂಗಳೂರು **ವಿ.ಟಿ. ಕಾಳೆ**

# ಲೇಖಕರ ನುಡಿ

ನಾನು ವಿದ್ಯಾರ್ಥಿ ದೆಸೆಯಲ್ಲಿದ್ದಾಗ ಮೈಸೂರಿನ ಶಿಲ್ಪಸಿದ್ಧಾಂತಿ ಶ್ರೀ ಸಿದ್ಧಲಿಂಗಸ್ವಾಮಿಗಳವರ ಗುರುಕುಲಕ್ಕೆ ಅಂದಿನ ಮುಖ್ಯಸ್ಥರು ನನ್ನ ಚಿತ್ರಕಲಾ ಕಲಿಕೆಯ ಪ್ರಥಮ ಗುರುಗಳು ಆದ ಶ್ರೀ ನಾಗೇಂದ್ರ ಸ್ಥಪತಿಯವರನ್ನು ಭೇಟಿ ಮಾಡಲು ಸುಭಾಷಿಣಿ ದೇವಿಯವರು ಬರುತ್ತಿದ್ದರಾದರೂ ಅವರ ಕಲಾ ಸಾಧನೆ ಬಗ್ಗೆ ನನಗೆ ಅಷ್ಟಾಗಿ ತಿಳಿದಿರಲಿಲ್ಲ. ಎಂ.ಟಿ.ವಿ.ಆಚಾರ್ಯ ಪ್ರಶಸ್ತಿ ನೀಡಲು ನಿರ್ಧರಿಸಿದಾಗ ಅವರ ಇರುವಿಕೆಯ ಸ್ಥಳವನ್ನು ಪತ್ತೆ ಹಚ್ಚಿ ಸಕಲ ಮಾಹಿತಿ ಪಡೆದು ಎಲ್ಲಾ ಪತ್ರಿಕೆಗಳಲ್ಲೂ ಪ್ರಕಟಿಸಿದೆನು. ಆ ಸಂದರ್ಭಕ್ಕಾಗಲೇ ಅವರಿಗೆ ವಯಸ್ಸು 80 ಆಗಿದ್ದು ಅನಾರೋಗ್ಯದಿಂದ ಕಾಲದೂಡುತ್ತಿದ್ದರು. ಮೈಸೂರಿನ ಅವರ ಮನೆಯಲ್ಲಿ ಇವರೊಬ್ಬರೇ ಏಕಾಂಗಿ. ದೇಹದ ಒಂದೊಂದು ಭಾಗವು ತೀವ್ರ ಪೈಪೋಟಿಗಿಳಿದು ತನ್ನ ಅಸ್ತಿತ್ವವನ್ನು ಕಳಚಿಕೊಳ್ಳಲು ಹವಣಿಸುತ್ತಿದ್ದವು. ಈ ಹಿನ್ನೆಲೆಯಲ್ಲಿಯೂ ಕಲಾ ವಿಷಯಗಳು ಬಂದಾಗ ಬಹಳ ಚೇತೋಹಾರಿಯಾಗಿ ಸ್ಪಂದಿಸುತ್ತಿದ್ದರು. ಬೆಂಗಳೂರಿನ ಚಿತ್ರಕಲಾ ಪರಿಷತ್ತಿನ ಬೆಳವಣಿಗೆಗಾಗಿ ಎಂ.ಎಸ್. ನಂಜುಂಡರಾವ್ ಅವರೊಡನೆ ದುಡಿದವರು. ಅಲ್ಲಿನ ಅಜೀವ ಸದಸ್ಯರಾಗಿ ಸಹಕಾರ್ಯದರ್ಶಿಯಾಗಿ ಎಂ.ಎಸ್.ಚಂದ್ರಶೇಖರ್, ಪಿ.ಆರ್. ತಿಪ್ಪೇಸ್ವಾಮಿ ಇವರೆಲ್ಲರ ಕಲಾ ಒಡನಾಟವುಳ್ಳವರಾಗಿದ್ದರು. ಅವರಿಗೆ ಇದ್ದ ಒಂದೇ ಆಸೆ ಎಂದರೆ ಮಾನಸಿಕ ಕಲಾಗುರುವಾಗಿದ್ದ ವರ್ಣಶಿಲ್ಪಿ ವೆಂಕಟಪ್ಪನವರ ಹೆಸರಿನ ಪ್ರಶಸ್ತಿ ಪಡೆಯಬೇಕೆಂಬುದು. ಆದರೇ ಅವರ ಅಂತ್ಯ ಕಾಲದಲ್ಲಿ ಅವರಿಗೆ ಸಹಾಯ ಪಡೆದ ಸಂಸ್ಥೆಗಳಾಗಲೀ, ಜನರಾಗಲೀ, ಸಹಾಯಹಸ್ತ ಚಾಚಲಿಲ್ಲವೆಂಬುದನ್ನು ಬಹಳ ವ್ಯಥೆಯಿಂದ ನನ್ನೊಡನೆ ಹೇಳುತ್ತಿದ್ದರು.

ಎಂ.ಟಿ.ವಿ.ಆಚಾರ್ಯ ಪ್ರಶಸ್ತಿ ನೀಡಿಕೆ ಸಂದರ್ಭದಲ್ಲಿ ಅವರ ಸಾಧನೆ ಪತ್ರಿಕೆಗಳಲ್ಲಿ ಬಂದುದನ್ನು ಗಮನಿಸಿದ ಸರ್ಕಾರ, ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಆ ವೇಳೆಗಾಗಲೇ ಅವರನ್ನು ತಳ್ಳುವ ಗಾಡಿಯಲ್ಲಿ ತಂದು ಕೂರಿಸಬೇಕಾಗಿತ್ತು. ಇಂತವರ ಕಲಾ ಸಾಧನೆಯನ್ನು ಕುರಿತು ಪ್ರಕಟಿಸಲು ರಾಜ್ಯ ಲಲಿತಕಲಾ ಅಕಾಡೆಮಿ ನಿರ್ಧರಿಸಿದ್ದು ಬಹಳ ಸಂತೋಷದ ವಿಷಯ. ಬರೆಯಲು ಅನುಮತಿ ನೀಡಿದ ಅಧ್ಯಕ್ಷರು ಮತ್ತು ಸದಸ್ಯರಿಗೂ ಬೆನ್ನು ತಟ್ಟಿ ಪ್ರೋತ್ಸಾಹಿಸಿದ ರಿಜಿಸ್ಟ್ರಾರ್‌ರವರಾದ ಶ್ರೀ ಮಲ್ಲಿಕಾರ್ಜುನಸ್ವಾಮಿಯವರಿಗೂ ಬರಹಗಳಲ್ಲಿನ ಓರೆಕೋರೆಗಳನ್ನು ತಿದ್ದಿ ಸಲಹೆ ನೀಡಿದ ಡಾ.ಅ.ಲ.ನರಸಿಂಹನ್ ಅವರಿಗೂ ಕನ್ನಡದ ಬರಹವನ್ನು ಇಂಗ್ಲೀಷ್‌ಗೆ ಭಾಷಾಂತರಗೊಳಿಸಿದ ಕಲಾವಿದ ಶ್ರೀ ಯು.ಎಸ್. ವೆಂಕಟರಾಮನ್ ಅವರಿಗೂ, ಮೈಸೂರು ಪ್ರಾಚ್ಯ ವಸ್ತು ಸಂಗ್ರಹಾಲಯದಲ್ಲಿರುವ ಕಲಾಕೃತಿಗಳ ಛಾಯಾಚಿತ್ರಗಳನ್ನು ಈ ಪುಸ್ತಕದಲ್ಲಿ ಬಳಸಿಕೊಳ್ಳಲು ಅನುಮತಿ ನೀಡಿದ ನಿರ್ದೇಶಕರಿಗೂ ಹೃತ್ಪೂರ್ವಕ ನೆನಕೆಗಳನ್ನು ಸಲ್ಲಿಸುವುದು ನನ್ನ ಆದ್ಯ ಕರ್ತವ್ಯವಾಗಿದೆ.

ಎಲ್. ಶಿವಲಿಂಗಪ್ಪ

# ಲೇಖಕರ ಪರಿಚಯ

ನಮ್ಮೊಡನೆ ಇರುವ ಕಲಾವಿದರ ಬಗ್ಗೆ ಬರೆಯುವುದಕ್ಕಿಂತ ಇಲ್ಲದವರ ಬಗ್ಗೆ ಬರೆಯುವುದು ಬಹಳ ಕ್ಲಿಷ್ಟವಾದುದು. ಸಂಶೋಧನೆಯ ರೀತಿಯಲ್ಲಿ ಆಯಾಯ ಕಲಾವಿದರನ್ನು ಕುರಿತು ಬರೆದಿರುವ ಲೇಖನಗಳ ಬಗ್ಗೆಯಾಗಲೀ, ರಚಿಸಿದ ಚಿತ್ರಗಳ ಬಗ್ಗೆಯಾಗಲಿ ಎಲ್ಲೆಲ್ಲಿ ಇವೆ ಎಂಬುದನ್ನು ಪತ್ತೆ ಹಚ್ಚಿ ಅವುಗಳನ್ನು ಛಾಯಾಚಿತ್ರಗೊಳಿಸಿಕೊಂಡು ಮುದ್ರಣಕ್ಕೆ ಅನುಕೂಲವಾಗುವಂತೆ ಸಿದ್ಧಪಡಿಸಬೇಕಾಗುತ್ತದೆ. ಅದಕ್ಕಾಗಿಯೇ ಛಾಯಾಗ್ರಾಹಕರೋರ್ವರನ್ನು ಕರೆದುಕೊಂಡು ಹೋಗಬೇಕಾಗುತ್ತದೆ. ಶಿವಲಿಂಗಪ್ಪನವರು ಸ್ವತಃ ಕಲಾವಿದರಾಗಿರುವ ಹಾಗೇ ಛಾಯಾಗ್ರಾಹಕರೂ ಆಗಿರುವುದರಿಂದ ಅವಶ್ಯವೆನಿಸಿದವುಗಳನ್ನು ಛಾಯಾಂಕನಗೊಳಿಸಿ ಅಣಿಗೊಳಿಸಿದ್ದಾರೆ.

ಈಗಾಗಲೇ ಇವರು ಬರೆದ ಹತ್ತಾರು ಪುಸ್ತಕಗಳು ಪ್ರಕಟವಾಗಿವೆ. ದೈನಂದಿನ ಪತ್ರಿಕೆಯಾದ ಉದಯವಾಣಿಯಲ್ಲಿ **ನಮ್ಮ ಕಲಾವಿದರು** ಎಂಬ ಅಂಕಣದಲ್ಲಿ ಹಲವಾರು ಕಲಾವಿದರನ್ನು ಶಿಲ್ಪಿಗಳನ್ನು ಪರಿಚಯಿಸಿದ್ದಾರೆ. ಕರ್ನಾಟಕದಲ್ಲಿನ ಕಲೆಯ ಸಂಪೂರ್ಣ ಮಾಹಿತಿ ಒದಗಿಸುವ **ಕರ್ನಾಟಕದಲ್ಲಿನ ಚಿತ್ರಕಲಾ ಬೆಳವಣಿಗೆ ಒಂದು ಸಮೀಕ್ಷೆ** ಎಂಬ ಪುಸ್ತಕ ಬರೆದು ಕಲಾಭ್ಯಾಸಿಗಳಿಗೆ ಮಾರ್ಗದರ್ಶಿ ಗ್ರಂಥವಾಗಿಸಿದ್ದಾರೆ. ವಚನಗಳಿಗೆ ಸೂಕ್ತ ಚಿತ್ರ ರಚಿಸಿ ತಕ್ಕ ವ್ಯಾಖ್ಯಾನ ಬರೆದು ಪ್ರಕಟಿಸಿದ್ದಾರೆ.

ಮರಳಚ್ಚು, ಥರ್ಮಾಕೋಲ್, ಪಿ.ವಿ.ಸಿ. ಪೈಪ್ ನಂತಹವುಗಳಲ್ಲಿ ಆಧುನಿಕ ರೀತಿಯ ಶಿಲ್ಪಗಳನ್ನು ಮಾಡಿ ಕಲಾವಲಯಕ್ಕೆ ಹೊಸತನ್ನು ನೀಡಿದ್ದಾರೆ. ಮೂಲತಃ ಕಲಾವಿದರಾಗಿರುವ ಶಿವಲಿಂಗಪ್ಪನವರು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಅನೇಕ ಕಲಾ ಪ್ರದರ್ಶನ ಮಾಡಿದ್ದಾರೆ. ಶಿಬಿರಗಳಲ್ಲಿ ಪ್ರಾತ್ಯಕ್ಷಿಕೆ ಹಾಗೂ ಉಪನ್ಯಾಸ ನೀಡಿದ್ದಾರೆ. ಕಳೆದ ವರ್ಷ ಆಕ್ಲೆಂಡ್, ನ್ಯೂಜಿಲಂಡ, ಆಸ್ಟ್ರೇಲಿಯಾ ಸೇರಿದಂತೆ ಹಲವು ದೇಶಗಳಲ್ಲಿ ಕಲಾಪ್ರದರ್ಶನ ಮಾಡಿದ್ದಾರೆ. 3ನೇ ಅಂತರ್ರಾಷ್ಟ್ರೀಯ ಶರಣ ಸಾಹಿತ್ಯ ಸಮ್ಮೇಳನದಲ್ಲಿ ಪ್ರತಿನಿಧಿಯಾಗಿ ಭಾಗವಹಿಸಿ ಪ್ರದರ್ಶನ ಮತ್ತು ಉಪನ್ಯಾಸ ನೀಡಿದ್ದಾರೆ. ಪ್ರಸ್ತುತ ಈ ಪುಸ್ತಕದಲ್ಲಿ ದಿವಂಗತ ಕಲಾವಿದೆ ಸುಭಾಷಿಣಿಯವರ ಸಮಗ್ರ ಕಲಾ ಬದುಕನ್ನು ಅನಾವರಣಗೊಳಿಸುವ ಯತ್ನ ಮಾಡಿದ್ದಾರೆ.

**ಜಿ.ಎಂ.ಹೆಗಡೆ**

ಹಿರಿಯ ಕಲಾವಿದ, ಶಿರಸಿ, ಉ.ಕ



# ಬಹುಮುಖ ಪ್ರತಿಭೆಯ ಸುಭಾಷಿಣಿ ದೇವಿ

ಲೇಖಕ : ಎಲ್.ಶಿವಲಿಂಗಪ್ಪ

ಕಲೆಯ ಉಳಿವು ವೃತ್ತಿಪರರಿಂದಲೋ ಪ್ರವೃತ್ತಿ ಅಥವಾ ಹವ್ಯಾಸಿಗಳಿಂದಲೋ ಎಂಬ ಜಿಜ್ಞಾಸೆ ಇರುವ ಹಾಗೆ ಯಾವುದೇ ಕಲೆ ಅಥವಾ ಸಂಸ್ಕಾರ ರಕ್ತಗತವಾಗಿಯೇ ಬರುವಂತಹದ್ದೇ ಇಲ್ಲವೇ ಸಾಧನೆಯಿಂದ ಬರುವಂತಹದ್ದೇ ಎಂಬ ವಿಚಾರ ಆಗಾಗ್ಗೆ ಚರ್ಚೆಗೆ ಗ್ರಾಸವಾಗುವುದುಂಟು. ಈ ವಿಚಾರಗಳು ಸಂದರ್ಭಾನುಸಾರ ವ್ಯಾಖ್ಯೆಗೊಂಡು ತನ್ನರಿವಿನ ಕಕ್ಷೆಯೊಳಗೆ ಪ್ರತಿಪಾದನೆಗೊಳ್ಳುತ್ತದೆ. ಸಂಸ್ಕಾರ-ಪ್ರವೃತ್ತಿ ಇವು ಬಲವಂತದಿಂದ ಬರುವಂತಹದ್ದಲ್ಲ, ಸ್ವಯಂ ಇಚ್ಛೆ ಇಲ್ಲವೇ ಗುಪ್ತಗಾಮಿನಿಯಾಗಿ ಹರಿಯುವ ಅಂತರ್ ವಿದ್ಯೆಯಿದು. ಇದು ಯಾರಲ್ಲಿ ಗಟ್ಟಿಗೊಂಡಿರುತ್ತದೆಯೋ ಅಂತಹವರು ಗೌರವಕ್ಕೆ ಪಾತ್ರಾರಾಗುತ್ತಾರೆ, ಕೀರ್ತಿವಂತರಾಗುತ್ತಾರೆ, ದೇಹ ಅಳಿದರೂ ಅವರ ಸಾಧನೆ ಸಮಾಜದ ಮುಂದಿರುತ್ತದೆ. ಸತ್ತರೂ ಸಂಪೂಜ್ಯಗೊಳ್ಳುತ್ತಾರೆಂಬುದಕ್ಕೆ ಸುಭಾಷಿಣಿದೇವಿಯವರ ಜೀವನ ಒಂದು ಉದಾಹರಣೆಯಾಗುತ್ತದೆ.

**ಹುಟ್ಟು ಮತ್ತು ದೈವಾನುಗ್ರಹ :**

ಹೃದಯ ಶ್ರೀಮಂತಿಕೆ ಮತ್ತು ಆರ್ಥಿಕ ಶ್ರೀಮಂತಿಕೆಯುಳ್ಳ ವಣಿಕ ಮನೆತನ. ತಾತ, ಮುತ್ತಾತಂದಿರು ಮೈಸೂರು ಕೃಷ್ಣರಾಜ ಒಡೆಯರ್ ಮತ್ತು ಚಾಮರಾಜ ಒಡೆಯರ್‌ರವರ ಕಾಲದಲ್ಲಿ ಮುಜರಾಯಿ ಭಕ್ಷಿಗಳಾಗಿದ್ದವರು. ತಂದೆ ಜೆ.ವೆಂಕಟಸ್ವಾಮಿ ಚೆಟ್ಟಿಯಾರ್ ಜಪಾನ್‌ನಲ್ಲಿ ಕೈಗಾರಿಕಾ ಉದ್ಯಮ ವ್ಯಾಸಂಗವನ್ನು ಮಾಡಿ ಬಂದವರು. ಜೊತೆಗೆ ಅಲ್ಲಿನ ಕಲೆ, ಸಂಸ್ಕೃತಿಯನ್ನು ಪ್ರೀತಿಸಿ ನಮ್ಮಲ್ಲಿಯೂ ಏಕೆ ಮಹಿಳೆಯರಿಗೆ ವಿಶೇಷ ಕೈಗಾರಿಕಾ ಶಿಕ್ಷಣ ನೀಡುತ್ತಿಲ್ಲ ಎಂದು ಚಿಂತಿಸಿ ಕಾರ್ಯೋನ್ಮುಖವಾದವರು. ಸುಭಾಷಿಣಿ ಹುಟ್ಟಿದ್ದು (20.05.1920) ಮೈಸೂರಿನ ಲಾನ್ಸ್‌ಡೌನ್ ಕಟ್ಟಡದಲ್ಲಿ, ಆಗ್ಗೆ ಅದು ಅವರ ಸ್ವಂತ ಮನೆ. ಈಗ ಅದು ವಾಣಿಜ್ಯ ಮಳಿಗೆಯಾಗಿದೆ. ತಾಯಿ ರತ್ನಮ್ಮ. ಜಗನ್ನಾಥ ಸ್ಟೋರ್ಸ್ ಎಂಬ ಡಿಪಾರ್ಟ್‌ಮೆಂಟ್ ಮಳಿಗೆ. ಒಳ್ಳೆಯ ವ್ಯಾಪಾರ. ತುಂಬಿದ ಶ್ರೀಮಂತಿಕೆ. ಮಗು ಹುಟ್ಟಿದಾಗ ಸಣ್ಣ ಮಕ್ಕಳು ತೊಟ್ಟಿಲಲ್ಲಿ ಮಲಗಿಸಿದಲ್ಲಿ ಗಲೀಜು ಮಾಡುವುದು ಸಹಜ. ಅದಕ್ಕಾಗಿ ಅತ್ಯಂತ ಬೆಲೆ ಬಾಳುವ ಚಿನ್ನದ ಹೊದಿಕೆಯಿದ್ದಂತಾ ಮಂಚವಿದ್ದರೂ ಅದರ ಮೇಲೆ ಮಗುವನ್ನು ಮಲಗಿಸದೇ ಸಾಧಾರಣ ಹಾಸಿಗೆ ಮೇಲೆ ತಾಯಿ ಮಕ್ಕಳ ವಾಸ. ಒಂದು ದಿನ ತಾಯಿ ರತ್ನಮ್ಮನವರಿಗೆ

ನಡುರಾತ್ರಿಯಲ್ಲಿ ಬೆನ್ನು ತಟ್ಟಿದ ಅನುಭವ. ಮಹಾವಿಷ್ಣು ಸ್ವರೂಪ ದರ್ಶನ. ಮಗು ಮಲಗಿಸಿದರೇ ಮಂಚ ಹಾಳಾಗುತ್ತಾ ಎಂಬ ಪ್ರಶ್ನೆ. ಈ ಮಗು ಸಾಮಾನ್ಯವೆಂದು ತಿಳಿಯಬೇಡಾ. ಈಗಿರುವ ಐಶ್ವರ್ಯ ಹೆಚ್ಚು ದಿನ ಉಳಿಯುವುದಿಲ್ಲ. ಈ ಮಗುವಿನ ಕೀರ್ತಿ ಮಾತ್ರ ಬಹಳ ಕಾಲದವರೆಗೆ ಇರುತ್ತದೆಂಬ ವಾಣಿ. ಗಾಬರಿಯಿಂದ ಕಣ್ ತೆರೆದು ಅವರ ಪತಿಯಲ್ಲಿ ನಡೆದ ಘಟನೆಯ ವಿವರ ನೀಡಿಕೆ. ಅಂದಿನಿಂದ ಮಗುವಿಗೆ ವಿಶೇಷ ಕಾಳಜಿ. ದೈವಾಂಶ ಸಂಭೂತಳೆಂದೇ ಅವರೆಲ್ಲರ ಅನಿಸಿಕೆ. (ಇಂತಹ ವಿಚಾರಗಳು ವೈಜ್ಞಾನಿಕ ಯುಗದಲ್ಲಿ ಅಪ್ರಸ್ತುತ ಎನಿಸಿದರೂ ಇಂದಿಗೂ ಭಾರತದಲ್ಲಿ ದೈವಪೂಜೆ, ಹೋಮ ಹವನ, ದಾನ ಇತ್ಯಾದಿಗಳಲ್ಲಿ ಅಪಾರ ನಂಬಿಕೆ ಇಟ್ಟುಕೊಂಡೇ ಜೀವನ ಸಾಗಿಸುತ್ತಿರುವುದು ಎಲ್ಲಾ ಕಡೆ ಕಾಣಬಹುದೇ ಹೊರತು ದೇವರಿಲ್ಲ ಎಂಬ ನಾಸ್ತಿಕತನವಿರುವವರು ತೀರಾ ವಿರಳ.)

## ಪ್ರೇರಣೆ ಮತ್ತು ಪರಿಸರ

ಮನೆಯ ತುಂಬ ಪೂಜಾ, ಧರ್ಮಾದಿಕಾರ್ಯಗಳು ಆಗಾಗ್ಗೆ ನಡೆಯುತ್ತಲೇ ಇದ್ದವು. ಕೃಷ್ಣರಾಜ ವೃತ್ತದ ಬಳಿಯಲ್ಲಿದ್ದ ಅಂಗಡಿಗೆ ತಂದೆ ಜೊತೆಯಲ್ಲಿಯೇ ಹೋಗುತ್ತಿದ್ದುದರಿಂದ ಸಾಮಾಜಿಕ ಪ್ರಜ್ಞೆ ಬೆಳೆಯಲು ಸಹಾಯಕ. ಕರ್ನಾಟಕದ ಪ್ರಖ್ಯಾತ ಕಲಾತಪಸ್ವಿ ದಿ|| ಕೆ.ವೆಂಕಟಪ್ಪನವರು ಸುಭಾಷಿಣಿಯವರ ತಂದೆಯವರ ಸ್ನೇಹಿತರು. ಕಲ್ಕತ್ತೆಯಲ್ಲಿ ವೆಂಕಟಸ್ವಾಮಿ ಚೆಟ್ಟಿಯಾರ್ ಮೆಡಿಕಲ್ ವಿದ್ಯಾರ್ಥಿಯಾಗಿದ್ದಾಗ ವೆಂಕಟಪ್ಪನವರು ಕಲ್ಕತ್ತೆಯ ರಾಯಲ್ ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಲಲಿತಕಲಾ ವಿದ್ಯಾರ್ಥಿ. ಆಗ ಅವರಿಬ್ಬರಿಗೂ ಆದ ಸ್ನೇಹ ಜೀವನಾಂತ್ಯದವರೆಗೂ ಇತ್ತು. ವೆಂಕಟಪ್ಪನವರು ಕಲಾ ರಚನೆಗೆ ಕುಳಿತ ನಂತರ ಮನಸ್ಸಿಗೆ ಕೊಂಚ ವಿಶ್ರಾಂತಿ ಬೇಕೆನಿಸಿದಾಗ ಮಾತ್ರ ಹೊರಬರುತ್ತಿದ್ದರು. ಅದು ಇವರ ಅಂಗಡಿಗೆ ಮಾತ್ರ. ತಂದೆಯವರೊಡನೆ ಕಲೆಯ ಬಗ್ಗೆಯೇ ಮಾತು. ಅನ್ಯ ವಿಷಯಗಳಿಂದ ದೂರ. ದೇಶ ವಿದೇಶಗಳ ಕಲೆ, ನಮ್ಮಲ್ಲಿ ಆಗುತ್ತಿರುವ ಬೆಳವಣಿಗೆ, ಬೆಂಗಾಲಿ ಚಿತ್ರದ ರಚನೆಗೂ ರವಿವರ್ಮನ ಚಿತ್ರಶೈಲಿಗೂ ಇರುವ ವ್ಯತ್ಯಾಸ, ಪ್ರಚಾರಕ್ಕಾಗಿ ಕಲಾವಿದರು ಅನುಸರಿಸುತ್ತಿರುವ ಮಾರ್ಗ ಇತ್ಯಾದಿ ವಿಷಯಗಳು ತಂದೆಯವರೊಡನೆ ಚರ್ಚಿಸುತ್ತಿದ್ದಾಗ ಅಲ್ಲೇ ಇರುತ್ತಿದ್ದ ಬಾಲಕಿ ಸುಭಾಷಿಣಿಗೆ ತಾನು ಅವರಂತೆ ಆಗಬೇಕೆಂಬ ಹಂಬಲ. ಸಣ್ಣ ಪುಟ್ಟ ಚಿತ್ರಗಳನ್ನು ಬರೆದು ತನ್ನ ತಂದೆಯ ಕೈಯಲ್ಲಿ ಕೊಟ್ಟರೆ ಅದನ್ನು ವೆಂಕಟಪ್ಪನವರಿಗೆ ತೋರಿಸಿ ಅದರ ತಪ್ಪು -ಒಪ್ಪುಗಳನ್ನು ತಿಳಿದುಕೊಳ್ಳುವಿಕೆ ಇವು ಮೈಸೂರಿನಲ್ಲಿ ವೆಂಕಟಪ್ಪನವರು ಇರುವವರೆಗೂ ನಡೆಯುತ್ತಿದ್ದ ಕ್ರಿಯೆ. ಜೊತೆಗೆ ಮಕ್ಕಳಾಟವ ಗೊಂಬೆಗಳು, ಬಹುಮಾನಕ್ಕೆ ನೀಡಬಹುದಾದ (Gift Items) ವಸ್ತುಗಳೇ ಅಧಿಕವಾಗಿದ್ದುದರಿಂದ ಆ ಗೊಂಬೆಗಳ ರೀತಿಯಲ್ಲಿಯೇ ನಾನು ಯಾಕೆ ಮಾಡಬಾರದು ಎಂಬ ಮನೋ ತುಡಿತ. ಆಟಪಾಟಗಳಲ್ಲಿ ಯಾವ ಆಸಕ್ತಿ ತೋರದೇ ಚಿತ್ರರಚನೆಯಲ್ಲೋ ಅಥವಾ ಗೊಂಬೆ ಮಾಡುವ ಕ್ರಿಯೆಯಲ್ಲೋ ತಲ್ಲೀನ. ಇಂತಹವುಗಳಿಗೆ ಮಾತಾ ಪಿತೃಗಳಿಂದ ಅಪರಿಮಿತವಾದ ಪ್ರೋತ್ಸಾಹ. ಬಾಲಕಿ ಸುಭಾಷಿಣಿಯವರಿಗೆ ಗುರುವಿನಿಂದ ನೇರವಾಗಿ ಶಿಕ್ಷಣ ಪಡೆಯಬೇಕೆಂಬಾಸೆ. ಆದರೆ ಅವಕಾಶವಿಲ್ಲ. ವೆಂಕಟಪ್ಪನವರು ಯಾರಿಗೂ ಕಲಿಸುತ್ತಿರಲಿಲ್ಲ. ನಾನೇ ವಿದ್ಯಾರ್ಥಿ ಎಂಬ ಭಾವನೆ. ಮಗಳನ್ನು ಶಾಂತಿ ನಿಕೇತನಕ್ಕೆ ಕಳಿಸಬೇಕೆಂದು ಬಯಸಿ ಸ್ನೇಹಿತರಾದ ವೆಂಕಟಪ್ಪನವರಲ್ಲಿ ಪ್ರಸ್ತಾಪಿಸಿದಾಗ ಅಲ್ಲಿನ ಬಂಗಾಲಿ ಶೈಲಿ ಮತ್ತು ವಾತಾವರಣಗಳ ಬಗ್ಗೆ ಒಲವಿಲ್ಲದ್ದರಿಂದ ಬೇಡವೆಂದು ಹೇಳಿದ ಪರಿಣಾಮ ಸುಭಾಷಿಣಿ ಅವರಿಗೆ ಭ್ರಮ ನಿರಸನ. ಯಾರನ್ನು ಗುರುವಾಗಿ ಸ್ವೀಕರಿಸುವುದು ಎಂಬ ತಳಮಳ. ಆ ವೇಳೆಗಾಗಲೇ ಅರಮನೆಯ ಸಂಬಂಧದಿಂದ ದೂರವಾಗಲು ಯತ್ನಿಸಿದ್ದರು ವೆಂಕಟಪ್ಪನವರು. ಇವರ ಮನೋಧರ್ಮವನ್ನರಿತ್ತಿದ್ದ

ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲವಾಗಿದ್ದರು. ಶ್ರೀ ಜಯಚಾಮರಾಜ ಒಡೆಯರ್‌ರವರ ಆಡಳಿತವಿತ್ತು. ಜನರಲ್ಲಿ ಹೊಂದಾಣಿಕೆ ಮನೋಭಾವ ಇಲ್ಲದಿದ್ದರಿಂದ ವೆಂಕಟಪ್ಪನವರು ಮೈಸೂರು ತೊರೆದು ಬೆಂಗಳೂರು ಸೇರಿಯೇ ಬಿಟ್ಟರು.

## ಕ್ರಮಬದ್ಧ ಕಲಿಕೆಗೆ ಸ್ವಾಮಿಗಳಿಗೆ ಶರಣು

ಕಲಾಭಿರುಚಿ ಜನ್ಮಗತವಾಗಿದ್ದರೂ ಮಾರ್ಗದರ್ಶಕರಿಲ್ಲದೇ ಪರಿತಾಪ. ರವಿವರ್ಮನ ಕ್ಯಾಲೆಂಡರ್ ಚಿತ್ರಗಳ ನಕಲು. ಶರೀರ ರಚನೆಗಳಲ್ಲಿ ಏರುಪೇರು. ವರ್ಣ ಸಂಯೋಜನೆಯಲ್ಲಿ ವ್ಯತ್ಯಯ. ಇವುಗಳನ್ನು ಸರಿಪಡಿಸಿಕೊಳ್ಳಲು ಗುರುವಿಗಾಗಿ ಹುಡುಕಾಟ. ಶಿಲ್ಪ ಸಿದ್ಧಾಂತಿ ಶ್ರೀ ಸಿದ್ಧಲಿಂಗಸ್ವಾಮಿಗಳಿಗೆ ಶರಣಾದರು. ಅವರಿಂದ ಶಿಕ್ಷಣ ಪಡೆಯಲು ಆರಂಭ 1944. ಸ್ವಾಮಿಗಳಾದರೋ ಶ್ರೀ ಜಯಚಾಮರಾಜ ಒಡೆಯರ್ ಅವರ ಗುರುಗಳಾಗಿದ್ದರು. ಚಿತ್ರ, ಶಿಲ್ಪ , ಆಗಮಶಾಸ್ತ್ರಗಳಲ್ಲಿ ಪಾಂಡಿತ್ಯವಿದ್ದು ಬೇರೆಯವರಿಗೂ ಕಲಿಸಿ ಕಲಾ ಬೆಳವಣಿಗೆ ಮಾಡಬೇಕೆಂಬ ಹಂಬಲ ಸ್ವಾಮಿಗಳದ್ದು. ಅದಕ್ಕಾಗಿಯೇ ಗುರುಕುಲ ಸ್ಥಾಪಿಸಿ ವಿದ್ಯಾರ್ಥಿಗಳಿಗೆ ಉತ್ತಮ ಕಲಾ ಶಿಕ್ಷಣ ನೀಡುತ್ತಿದ್ದರು.

ಕಲ್ಲಿನಲ್ಲಿ ಕೆತ್ತನೆ ಮಾಡಬೇಕೆಂಬಾಸೆಗೆ ಸ್ವಾಮಿಗಳು ತಣ್ಣೀರನ್ನೆರಚದೇ ಪ್ರೋತ್ಸಾಹಿಸಿದರು. ಮಹಿಳೆಯರು ಪುರುಷರಂತೆ ಧೈರ್ಯಶಾಲಿಗಳಾಗಿ ಶಿಲ್ಪಗಳನ್ನು ಮಾಡಬೇಕೆಂದು ಹುರಿದುಂಬಿಸಿ ಕೆತ್ತನೆ ಕಲಿಸಿದರು. ದೇವತಾ ಶಿಲ್ಪ , ದೈತ್ಯ ಶಿಲ್ಪ , ಸಹಜವಾದ ಮನುಷ್ಯ ಶಿಲ್ಪ ಇವುಗಳಿಗೆ ಇರುವ ಅಳತೆ ಪ್ರಮಾಣ ತಿಳಿ ಹೇಳಿ ಮಾಡಲು ಅವಕಾಶ ಮಾಡಿಕೊಟ್ಟರು. ಮನೆಯಲ್ಲಿ ಬಣ್ಣದ ಚಿತ್ರಗಳನ್ನು ಬರೆಯುವುದು, ಗುರುಕುಲದಲ್ಲಿ ಕೆತ್ತನೆ ಮಾಡುವುದು ಒಟ್ಟಾರೆ ಇಡೀ ದಿವಸದ ಬಹುಭಾಗ ಕಲಾ ರಚನೆಯಲ್ಲಿಯೇ ಮಗ್ನ. ಸುಭಾಷಿಣಿಯವರ ಕಲಿಯುವ ಹಂಬಲಕ್ಕೆ ಒಳ್ಳೆಯ ಚಾಲನೆ. ಶಾಸ್ತ್ರಗ್ರಂಥ ಅಧ್ಯಯನಕ್ಕೆ ಅವಕಾಶ ಒದಗಿಸಿಕೊಟ್ಟರು.

## ಪ್ರದರ್ಶನ - ಬಹುಮಾನ

ಸ್ವಾತಂತ್ರ ಬಂದ ವರ್ಷ ಎಲ್ಲೆಡೆ ಸಂಭ್ರಮವೋ ಸಂಭ್ರಮ. ದಸರಾ ವಸ್ತುಪ್ರದರ್ಶನಕ್ಕೆ ಆ ವರ್ಷ ಎಲ್ಲಿಲ್ಲದ ಕಳೆ. ಅದೇ ವರ್ಷ (1947) ಪ್ರಥಮ ಬಾರಿಗೆ ಕಳುಹಿಸಿದ 'ರಾಮಶಬರಿ' ಮಿನೇಚರ್ ಚಿತ್ರಕ್ಕೆ ಪ್ರಥಮ ಬಹುಮಾನ. ಅಲ್ಲಿಂದ ಪ್ರತಿವರ್ಷ ಚಿತ್ರ ಕಳುಹಿಸುವ ಪರಿಪಾಠ ಬೆಳೆಸಿಕೊಂಡರು. ಹಾಗೆಯೇ, ಒಂದಲ್ಲಾ ಒಂದು ಬಹುಮಾನ ದೊರಕುತ್ತಲೇ ಇತ್ತು. 1949ರಲ್ಲಿ All India Industrial Fine Arts, Bangalore ಇಲ್ಲಿ ನಡೆದ ವಸ್ತು ಪ್ರದರ್ಶನದಲ್ಲಿ ಇವರ ಮಿನೇಚರ್ ಚಿತ್ರಗಳಿಗೆ ಪ್ರಥಮ ಬಹುಮಾನ ಮತ್ತು ಬೆಳ್ಳಿ ಕಪ್ ದೊರೆಯಿತು. ಹಾಗೆಯೇ ದೆಹಲಿ, ಕಲ್ಕತ್ತ ಮುಂತಾದ ಕಡೆ ಇವರ ಕಲಾಕೃತಿಗಳು ಪ್ರದರ್ಶನಗೊಂಡವು. 1950ರಲ್ಲಿ ಇವರು ಮಾಡಿದ ಬಾಲಗಣಪ ಶಿಲ್ಪಕ್ಕೆ ಬೆಳ್ಳಿ ಪದಕ. 1954ರಲ್ಲಿ ಅರ್ಧನಾರೀಶ್ವರ ಶಿಲ್ಪಕ್ಕೆ ಪ್ರಥಮ ಬಹುಮಾನ. 1962ರಲ್ಲಿ ಸಾಂಸ್ಕತಿಕ ರಾಯಭಾರಿಯಾಗಿ (Cultural Deligation) ರಷ್ಯಾಕ್ಕೆ ಹೋಗುವುದಕ್ಕೆ ಆಯ್ಕೆಯಾಗಿತ್ತು. ಆದರೆ ಆ ವೇಳೆಗೆ ತಂದೆ ಅನಾರೋಗ್ಯದಿಂದ ಇದ್ದುದರಿಂದ ಸಿಕ್ಕ ಅವಕಾಶವನ್ನು ಬಿಡಬೇಕಾಯಿತು ಎಂಬುದು ಅವರ ಮನದ ಕೊರಗಾಗಿತ್ತು. ದೆಹಲಿಯಲ್ಲಿ ಕೇಂದ್ರ ಕರಕುಶಲ ಮಂಡಳಿ ಏರ್ಪಡಿಸಿದ್ದ ಅಂತರರಾಷ್ಟ್ರೀಯ ಮಹಿಳಾ ವರ್ಷದ ಅಂಗವಾಗಿ ಮಹಿಳಾ ಕರಕುಶಲಿಗಳ ಪ್ರದರ್ಶನದಲ್ಲಿ ಕರ್ನಾಟಕದ ಪರವಾಗಿ

ಆಯ್ಕೆಯಾಗಿದ್ದವರು ಸುಭಾಷಿಣಿ ಒಬ್ಬರೇ. ಇವರೋರ್ವರೇ ಭಾರತ ಮಟ್ಟದಲ್ಲಿ ಮಹಿಳಾ ಶಿಲ್ಪಿಯಾಗಿದ್ದರು. ಅಲ್ಲಿನ ಎಲ್ಲಾ ಪತ್ರಿಕೆಗಳು ಮುಖಪುಟದಲ್ಲಿ ಕೆತ್ತನೆ ಮಾಡುತ್ತಿರುವ ಸುಭಾಷಿಣಿಯವರ ಚಿತ್ರ ಪ್ರಕಟಿಸಿದವು. ವಿದೇಶಿ ಪತ್ರಿಕೆಗಳು ಸಹ ಪ್ರಶಂಸಿಸಿದವು. What a great gift God has given to Subhashini ಎಂದು ಉಲ್ಲೇಖಿಸಿದವು. ಅಂದಿನ ಪ್ರಧಾನಿ ಇಂದಿರಾಗಾಂಧಿಯವರು ಸಹ ಬಂದು ಪ್ರಶಂಸಿಸಿ ಛಾಯಾಚಿತ್ರ ತೆಗೆಸಿಕೊಂಡರು.

## ಕಲಾಕೃತಿಗಳನ್ನು ಕುರಿತು

ಕಂಪ್ಯೂಟರ್ ಎಂಬ ಮಾಯಾ ಪೆಟ್ಟಿಗೆಯ ಮೂಲಕ ನಿರೀಕ್ಷಣೆಗೆ ಮೀರಿದ ಬದಲಾವಣೆಗಳಾಗಿ ಚಿತ್ರಗಳ ಮುದ್ರಣ ಅತ್ಯಂತ ಕನಿಷ್ಟ ಅಳತೆಗಳಿಂದ ಗರಿಷ್ಟ ಮಟ್ಟದವರೆಗೆ ಮುದ್ರಿಸಬಹುದಾಗಿದೆ. ಹಿನ್ನೆಲೆ -ಮುನ್ನೆಲೆಗಳನ್ನು ಅಥವಾ ಮುಖದ ಸಹಜ ಬಣ್ಣವನ್ನು ಸಹ ಮೂಲ ಚಿತ್ರಕ್ಕೆ ಭಂಗಬಾರದಂತೆ ಬದಲಾಯಿಸಬಹುದಾಗಿದೆ. ಇವೆಲ್ಲವೂ ಮುಂದುವರಿದ ತಂತ್ರಜ್ಞಾನದ ವಿಚಾರ. ಆದರೆ 50 ವರ್ಷಗಳ ಹಿಂದಿನದನ್ನು ಸ್ಮರಿಸಿದಾಗ ನಮ್ಮ ಕಲಾವಿದರು ಮುಖಚಿತ್ರಗಳನ್ನು ಬರೆಯಲು ಅದೆಷ್ಟು ಸಾಧನೆ ಮಾಡಬೇಕಾಗಿತ್ತು. ಊಹಿಸಲು ಸಾಧ್ಯವಿಲ್ಲದ ಪರಿಶ್ರಮ ಅವರದಾಗಿತ್ತೆಂದೆಂಬುದಕ್ಕೆ ಅಂಚೆ ಕಾಗದದ ಅಳತೆ ಮಾತ್ರವಲ್ಲ ಅದಕ್ಕಿಂತಲೂ ಕಿರಿದಾದ ಅಂಚೆ ಚೀಟಿ (Stamp size) ಯಗಲದ ಮುಖಚಿತ್ರ ರಚಿಸುತ್ತಾರೆಂದರೆ ಅಚ್ಚರಿ ತರುತ್ತದೆ. ಕರ್ನಾಟಕದಲ್ಲಿ ಕೆ.ವೆಂಕಟಪ್ಪನವರು ರಚಿಸಿರುವ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಚಿತ್ರ ಮೈಸೂರಿನ ಜಗನ್‌ಮೋಹನ ಅರಮನೆಯಲ್ಲಿ ಇಂದಿಗೂ ಕಾಣಬಹುದಾಗಿದೆ. ಮುಖ ಕ್ಷೌರ ಮಾಡಿಕೊಂಡಾಗ ಕಾಣುವ ರೀತಿ ಹಾಗೂ ಕಣ್ಣುಗಳ ರೆಪ್ಪೆಯ ಕೂದಲು ಸಹ ಕಾಣುವಂತೆ ಚಿತ್ರಿಸಿರುವ ಅವರ ಸಾಮರ್ಥ್ಯವನ್ನು ಪದಗಳಲ್ಲಿ ಹೇಳಲು ಸಾಧ್ಯವಿಲ್ಲ. ಇನ್ನೊಬ್ಬರಿಗೆ ಹೋಲಿಕೆ ಮಾಡಲು ಸಾಧ್ಯವಿಲ್ಲ. ಇವರ ರಚನಾ ಶೈಲಿಯಿಂದ ಪ್ರೇರಿತರಾದವರು ಹಲವು ಮಂದಿಯಾದರೂ ಸಾಧನೆ ಮೂಲಕ ಸಿದ್ಧಿಯನ್ನು ಪಡೆದುಕೊಂಡವರಲ್ಲಿ ಸುಭಾಷಿಣಿ ದೇವಿಯವರು ಮೊದಲಿಗರಾಗುತ್ತಾರೆ.

ಇವರು ಬರೆದ ಅಂಚೆ ಕಾಗದದಳತೆಯ ರಾಷ್ಟ್ರನಾಯಕರುಗಳಾದ ಮಹಾತ್ಮಗಾಂಧಿ, ಸುಭಾಷ್ ಚಂದ್ರಬೋಸ್, ಪಂಡಿತ ಜವಹರಲಾಲ್ ನೆಹರು, ಇಂದಿರಾ ಗಾಂಧಿ, ಸರೋಜಿನಿ ನಾಯ್ಡು, ರವೀಂದ್ರನಾಥ ಟಾಗೂರ್, ಜಯಚಾಮರಾಜ ಒಡೆಯರ್, ಗುರುಗಳಾದ ಶಿಲ್ಪ ಸಿದ್ಧಾಂತಿ ಸಿದ್ಧಲಿಂಗ ಸ್ವಾಮಿಗಳು, ಕೆ. ವೆಂಕಟಪ್ಪ ಮತ್ತು ತಮ್ಮ ತಂದೆ ತಾತನ ಚಿತ್ರಗಳಲ್ಲದೆ ದೇವತಾ ಚಿತ್ರಗಳಾದ ಮಹಿಷಾಸುರ ಮರ್ದಿನಿ, ಶಿವಪಾರ್ವತಿ, ಗಜೇಂದ್ರ ಮೋಕ್ಷ, ಅಂಧಕಾಸುರ ಸಂಹಾರ, ನಟರಾಜ ಮುಂತಾದ ಚಿತ್ರಗಳನ್ನು ಗಮನಿಸುತ್ತಾ ಹೋದಂತೆ ಅವು ಬರಿ ಕಣ್ಣುಗಳಿಂದ ಸೂಕ್ಷ್ಮಾತಿ ಸೂಕ್ಷ್ಮ ರೇಖಾವಿನ್ಯಾಸವನ್ನಾಗಲೀ ವರ್ಣಲೇಪನವನ್ನಾಗಲೀ ನೋಡಲು ಸಾಧ್ಯವಿಲ್ಲವೆನಿಸುತ್ತದೆ. ಪ್ರತ್ಯೇಕವಾದ ಮಸೂರವನ್ನಿಡಿದೇ (Lens) ನೋಡುತ್ತಾ ಹೋದಂತೆ ಸುಭಾಷಿಣಿ ದೇವಿಯವರ ಸಾಧನೆ ಪರಿಶ್ರಮಗಳ ಬಗ್ಗೆ ಬರೆಯಲು ಅದಾವ ಶಬ್ದ ಬಳಸಬೇಕೆಂಬ ಜಿಜ್ಞಾಸೆ ಉಂಟಾಗುತ್ತದೆ. ಸಾಗರಕ್ಕೆ ಸಾಗರವನ್ನೇ ಉಪಮೆ ಕೊಡಬಹುದೆ ಹೊರತು ಮತ್ತಾವುದೂ ಸಾಧ್ಯವಿಲ್ಲ ಎಂಬ ಕವಿವಾಣಿಯಂತೆ ಸುಭಾಷಿಣಿಯವರ ಕಲಾಸಾಧನೆಗೆ ಸರಿಸಾಟಿಯಾಗಿ ಅವರೇ ನಿಲ್ಲುತ್ತಾರೆಯೇ ವಿನಃ ಇನ್ನಾವ ಕಲಾವಿದೆಯೂ ಸರಿ ಸಾಟಿಯಾಗಲಾರರು.

ಈ ಮೇಲ್ಮಾತಿಗೆ ಮುಖ್ಯ ಕಾರಣ ಹಿರಿಯ ಸಮಕಾಲೀನರಾದ ವೈ.ನಾಗರಾಜ, ವೈ.ಸುಬ್ರಮಣ್ಯರಾಜು, ಎಸ್.ನಂಜುಂಡಸ್ವಾಮಿ, ಎಸ್.ನರಸಿಂಹಸ್ವಾಮಿ, ಎಫ್.ಎಂ.ಸೂಫಿ ತದನಂತರದ ಎಂ.ಜೆ.ಶುದ್ಧೋದನ,

ಎಂ.ವೀರಪ್ಪ , ಕಾಳಪ್ಪ , ರಾ.ಸೀತಾರಾಂ, ಪಿ.ಆರ್.ತಿಪ್ಪೇಸ್ವಾಮಿ, ಎಂ.ಇ.ಗುರು, ಎಂ.ಟಿ.ವಿ.ಆಚಾ... ಎಂ.ಎಸ್.ಚಂದ್ರಶೇಖರ್ ಇನ್ನು ಹಲವು ಕಲಾವಿದರು ಮೈಸೂರಿನವರೇ ಆಗಿದ್ದು, ಅವರುಗ... ಕಲಾಚಿತ್ರಗಳು ಗಾತ್ರ ಮತ್ತು ಪಾತ್ರದಲ್ಲಿ ದೊಡ್ಡ ಪ್ರಮಾಣದಲ್ಲಿವೆ. ಆದರೆ ಸುಭಾಷಿಣಿಯವರ ಚಿತ್ರಗಳು ಅಂಚೆ ಕಾಗದದಳತೆಯಲ್ಲಿದ್ದು ಅವರ ಪರಿಶ್ರಮವನ್ನು ಬಿಂಬಿಸುತ್ತವೆ.

ಯಾವುದೇ ಸರ್ಕಾರಿ ಶಾಲೆಗಳಿಗೆ ಹೋಗದೇ ಸರ್ಟಿಫಿಕೇಟ್ ಪಡೆಯದೇ ಸ್ವತಂತ್ರವಾಗಿ ಕಲಿತು ಕಲೆಯಲ್ಲಿ ಒಂದು ನಿರ್ದಿಷ್ಟ ಸ್ಥಾನಕ್ಕೆ ಬಂದಿದ್ದರೆಂಬುದು ಸಾಮಾನ್ಯವಾದ ವಿಷಯವಲ್ಲ.

ವೆಂಕಟಪ್ಪನವರನ್ನೇ ಗುರುವನ್ನಾಗಿ ಸ್ವೀಕರಿಸಿಕೊಂಡು ಅವರಂತೆ ಇವರು ಸಹ ಮದುವೆಯಾಗದೇ ಕಲೆಯನ್ನೇ ಆರಾಧ್ಯ ದೈವವನ್ನಾಗಿಸಿಕೊಂಡು ಚಿತ್ರ ರಚನೆಯಲ್ಲೇ ತಮ್ಮಿರುವಿಕೆಯನ್ನು ಕಂಡು ಕೊಂಡವರು. ಆದರೆ ಸುಭಾಷಿಣಿಯವರು ಸಮಾಜ ಮುಖಿಯಾಗಿ ಸಹ ಸಾಕಷ್ಟು ಕೆಲಸ ಮಾಡಿದ್ದಾರೆಂಬುದನ್ನು ಮುಂದಿನ ಪುಟಗಳಲ್ಲಿ ತಿಳಿಯಬಹುದಾಗಿದೆ.

ಸುಭಾಷಿಣಿಯವರು ಹೆಚ್ಚಿನ ಪ್ರಮಾಣದಲ್ಲಿ ಚಿತ್ರ ರಚನೆ ಮಾಡದಿದ್ದರೂ ಮಾಡಿರುವುದರಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಎಂದು ವಿಂಗಡಿಸಬಹುದಾಗಿದ್ದು, ಅವುಗಳಲ್ಲಿ ಕೆಲವನ್ನಾದರೂ ವಿಶ್ಲೇಷಿಸುವ ಮೂಲಕ ಕಲಾವಿದೆಯ ವ್ಯಕ್ತಿತ್ವ ದರ್ಶನ ಮಾಡಬಹುದಾಗಿದೆ.

**ಆದರ್ಶ ಅಂತ್ಯ**

ಹುಟ್ಟು ಅನಿಶ್ಚಿತ, ಸಾವು ನಿಶ್ಚಿತ ಎಂಬ ಅನುಭವದ ನುಡಿಯಿದೆ. ಸಾವನ್ನು ಸ್ವಾಗತಿಸುವವರು ಇದ್ದಾರೆ. ಸಾವು ಬರುತ್ತದಲ್ಲಾ ಎಂದು ಮಮ್ಮಲ ಮರುಗುವವರು ಇದ್ದಾರೆ. ತಮ್ಮ ಸಾವಿನ ನಂತರದಲ್ಲಾಗುವ ಇಷ್ಟಾನಿಷ್ಟಗಳನ್ನು ಊಹಿಸಿಯೇ ಮಾತಿನಿಂದ ವ್ಯಕ್ತಪಡಿಸುವುದನ್ನು ನಿಚ್ಚಳವಾಗಿ ಎಲ್ಲೆಲ್ಲೂ ಕಾಣುತ್ತೇವೆ. ಅಕ್ಕರೆ ಬಲ್ಲ ಮುತ್ಸದ್ದಿಯಂತೂ ಬರಹಗಳಿಂದ ಬರಬಹುದಾದುದನ್ನು ಊಹಿಸಿ ತನ್ನಿಚ್ಛೆ ಹೀಗಿದೆಯೆಂದು (Will) ದಾಖಲಿಸುವುದು ಮತ್ತೊಂದು ಪರಿ. ಆದರೆ ಕಲಾವಿದ ಅಥವಾ ಕಲಾವಿದೆ ತನ್ನ ಸಾವಿನ ನಂತರದಲ್ಲೇನಾಗಬಹುದೆಂದು ಊಹಿಸಿ ಚಿತ್ರರೂಪದಲ್ಲಿ ಬರೆದಿರುವುದನ್ನು ಇದುವರೆಗೂ ಎಲ್ಲಿಯೂ ಕಂಡಿದ್ದಿಲ್ಲ. ಅಂತಹ ಅಪರೂಪದ ಮನೋ ಇಂಗಿತವನ್ನು ರೇಖೆಗಳ ಮೂಲಕ ಚಿತ್ರಿಸಿರುವ ರಾಜ್ಯದ ಏಕೈಕ ಕಲಾವಿದೆ ಸುಭಾಷಿಣಿ ದೇವಿ.

**ಆದರ್ಶ ಅಂತ್ಯ**

ಆದರ್ಶ ಅಂತ್ಯ ಎಂದು ಹೆಸರಿಸಿರುವ ರೇಖಾ ಚಿತ್ರದಲ್ಲಿ ಸರಸ್ವತಿಯ ಪಾದದ್ವಯಗಳಿಗೆ ತನ್ನ ಬಾಹುದ್ವಯಗಳಿಂದ ಸುತ್ತುವರಿದು ಶಿರಸ್ಸನ್ನು ಪಾದದಲ್ಲಿಟ್ಟು ಇಹದ ಇರಿವಿನಿಂದ ದೂರ ಸಾಗಿದಂತೆಯೂ ಅಕ್ಕಪಕ್ಕದಲ್ಲಿ ಕ್ಯಾನವಾಸ್ ಬೋರ್ಡ್, ಕುಂಚ, ಬಣ್ಣ ಕಲೆಸುವ ಪ್ಯಾಲೆಟ್, ಬಣ್ಣದ ಟ್ಯೂಬ್‌ಗಳು, ಪೂರ್ಣವಾಗದ ಹಾಗೂ ಪೂರ್ಣವಾದ ಚಿತ್ರಗಳು ಚೆಲ್ಲಾಪಿಲ್ಲಿ ಬಿದ್ದಿರುವುದು ಒಂದು ಕಡೆಯಾದರೆ ಮತ್ತೊಂದು ಕಡೆ ಸುತ್ತಿಗೆ, ಉಳಿ, ಅರ, ಮೂಲೆಮಟ್ಟ ಮುಂತಾದ ಶಿಲ್ಪ ಕೆತ್ತನೆಯ ಪರಿಕರಗಳ ಜೊತೆಗೆ ಅಪೂರ್ಣಗೊಂಡ ವಿಗ್ರಹಗಳು ಅಸ್ತವ್ಯಸ್ತವಾಗಿ ಅಲ್ಲಲ್ಲಿ ಹರಡಿರುವಂತೆಯೂ ಸರಸ್ವತಿಯ ಪದ ತಲದ

ಪಕ್ಕದಲ್ಲಿ ಓಲೆಗರಿ ಕಟ್ಟೊಂದು ಅನಾಥ ಪ್ರಜ್ಞೆಯಿಂದ ಬಿದ್ದಿರುವಂತೆಯೂ, ವೀಣೆಯೊಂದು ನುಡಿಸುವವರಿಲ್ಲದೇ ವೈಣಿಕನಿಗಾಗಿ ಕಾಯುತ್ತಿರುವಂತೆಯೂ ಚಿತ್ರಿಸಿ ದೇಹದಿಂದ ಆತ್ಮಜ್ಯೋತಿಯು ಊರ್ಧ್ವಮುಖವಾಗಿ ಪಯಣಿಸುವ ದ್ಯೋತಕವಾಗಿ ನಭದಲ್ಲಿನ ಸೂರ್ಯಚಂದ್ರರನ್ನು ಸಾಂಕೇತಿಕವಾಗಿ ಚಿತ್ರಿಸಿದ್ದಾರೆ. ಇದು ಕಲ್ಪನಾ ಚಿತ್ರ ಅನ್ನುವುದಕ್ಕಿಂತ ವಾಸ್ತವ ಎಂಬುದೆ ಸತ್ಯ. ಆರೇಳು ವರ್ಷ ಅನಾರೋಗ್ಯದಿಂದ ಹಾಸಿಗೆ ಹಿಡಿದಾಗಲೇ ಅವರಿಗಾದ ನೋವನ್ನು, ಸಾವಿನ ನಂತರದಲ್ಲಿ ಕಾಣುವ ಸತ್ಯವನ್ನು ಚಿತ್ರಿಸಿರುವುದು ಇದು ಕೇವಲ ಚಿತ್ರವೆಂದು ಯಾರೂ ಭಾವಿಸುವ ಹಾಗಿಲ್ಲ. ನಿಜಕ್ಕೂ ಅವರು ಕಾಲವಾದ ನಂತರದಲ್ಲಿ ಕಲಾಭಿಮಾನಿಗಳು ಕಂಡ ನೈಜ ಚಿತ್ರಣವಾಗಿತ್ತು. ಕಲೆ, ಸಾಹಿತ್ಯ, ಸಮಾಜ ಸೇವೆಗಳಿಗಾಗಿಯೇ ತಮ್ಮ ದೇಹವನ್ನು ಮುಡಿಪಿಟ್ಟಿದ್ದ ಇವರು ಅವಿವಾಹಿತೆಯಾಗಿಯೇ ಇದ್ದು ತ್ಯಾಗಮಯ ಬದುಕಿನಿಂದ ಜೀವಿಸಿ ಇತರರಿಗೆ ಆದರ್ಶಪ್ರಾಯರಾಗಿದ್ದರು. ಈ ರೇಖಾ ಚಿತ್ರವನ್ನು ಈ ಲೇಖಕನಿಗೆ ತೋರಿಸಿ ವರ್ಣಚಿತ್ರ ರಚನೆ ಮಾಡಬೇಕೆಂಬಾಸೆಯಿದೆ. ಆದರೆ ನನ್ನ ಆರೋಗ್ಯ ಪದೇ ಪದೇ ಕೈಕೊಡುತ್ತಿದೆಯೆಂದು ಆ ತೀವ್ರತರವಾದ ಅನಾರೋಗ್ಯದಲ್ಲಿಯೂ ಚಿತ್ರ ರಚಿಸಬೇಕೆಂಬ ಹಂಬಲ ವ್ಯಕ್ತ ಪಡಿಸುವುದು ಅವರಲ್ಲಿನ ಆಸಕ್ತಿಯ ಪ್ರತೀಕವಾಗಿತ್ತು. ಅಂತೆಯೇ ಅವರ ನೆನಪಿನ ಶಕ್ತಿ ಮಾತ್ರ ಅಗಾಧವಾಗಿದ್ದು, ಈ ಲೇಖಕ ಬಾಲ್ಯದಲ್ಲಿ ಗುರುಕುಲದ ವಾರಸುದಾರರಾದ ಪ್ರಸಿದ್ಧ ಶಿಲ್ಪಿ ನಾಗೇಂದ್ರ ಸ್ಥಪತಿಯವರಲ್ಲಿ ಕಲಿಯಲು ಹೋಗುತ್ತಿದ್ದಾಗ ಅವರ ಬಳಿ ಕಲೆ ಬಗ್ಗೆ ಸಮಾಲೋಚಿಸಲು ಬರುತ್ತಿದ್ದುದನ್ನು ತಾವೇ ನೆನಪಿಸಿಕೊಂಡರು.

ರೂಪಾಂತ್ಯ

ಯೌವ್ವನ, ಸೌಂದರ್ಯ, ಆಸ್ತಿ ಇವೆಲ್ಲವೂ ನಿರಂತರವಾಗಿ ನಮ್ಮೊಡನೆ ಇರಲೆಂಬ ಹಂಬಲ. ಅದಕ್ಕಾಗಿ ಮಾಡುವ ಯತ್ನ ಹಲವು. ತನ್ನ ರೂಪರಾಶಿಯಿಂದ ಪುರುಷನನ್ನು ಗೆಲ್ಲಲು ತನ್ನೆಲ್ಲಾ ಅಂಗಸೌಷ್ಠವವನ್ನು ಪ್ರದರ್ಶಿಸುವ ಹುನ್ನಾರ, ರಾಜ್ಯದ ಅಳಿವು ಉಳಿವುಗಳಲ್ಲಿ ಪ್ರಮುಖಪಾತ್ರ. ರಾಮಾಯಣ ಮಹಾಭಾರತಗಳು ನಡೆದುದೇ ಹೆಣ್ಣಿನ ರೂಪಕ್ಕೆ ಸೋತು. ಇಂತಹ ದೃಷ್ಟಾಂತಗಳನ್ನು ಕುರಿತು ಜ್ಞಾನಿಗಳು, ದಾರ್ಶನಿಕರು, ವಿರಾಗಿಗಳು ಹೇಳಿರುವ ಮಾತುಗಳು ಸ್ಮೃತಿಪಟಲದಿಂದ ದೂರವಾಗಿವೆ ಹೊರತು ದೃಶ್ಯಕಾವ್ಯದಂತೆ ಜನರ ಮೇಲೆ ಹೆಚ್ಚಿನ ಪರಿಣಾಮ ಬೀರಿಲ್ಲ.

ಈ ವಾಸ್ತವಿಕ ಸತ್ಯವನ್ನರಿತ ಸುಭಾಷಿಣಿದೇವಿಯವರು ಯೌವ್ವನ ರೂಪ ಶಾಶ್ವತವಲ್ಲವೆಂಬ ಜೀವನ ಸಿದ್ಧಾಂತವನ್ನು ಚಿತ್ರದ ಮೂಲಕ ಅಭಿವ್ಯಕ್ತಿಸಿದ್ದಾರೆ. ನವ ಯೌವ್ವನದ ತರುಣಿಯ ಕೈಯಲ್ಲೊಂದು ಕನ್ನಡಿ. ಇದು ಸದಾಕಾಲ ತನ್ನ ರೂಪಕ್ಕೆ ಮಹತ್ವ ಕೊಡುವುದರ ಸಂಕೇತ. ಅವಳ ಮುಂದೆ ಮೋಹಕ ಬೆಡಗಿನ ನವಿಲು. ಇದು ಅವಳ ಚಂಚಲತೆಯ ಪ್ರತೀಕ. ಅವಳ ಹಿಂಬದಿಯಲ್ಲಿ ಅರಳಿದ ಸಸ್ಯ ಸಮೂಹ. ಅವುಗಳನ್ನು ಮುಡಿದು ಹಿರಿ ಹಿರಿ ಹಿಗ್ಗುವ ವಾತಾವರಣ ಇವೆಲ್ಲವೂ ಯೌವ್ವನವನ್ನು ಕುರಿತದ್ದು.

ತದನಂತರದಲ್ಲಿ ತೋರಿಸುವ ದೃಶ್ಯದಲ್ಲಿ ಮುದುಕಿಯೋರ್ವಳ ಚಿತ್ರ. ಅವಳ ಹಿಂಬದಿಯಲ್ಲಿ ಎಲೆ, ಪುಷ್ಪಗಳು ಉದುರಿದ ಬೋಳುಮರ ಜೊತೆಗೊಂದು ರಸ್ತೆಯಂಚಿನಲ್ಲಿರುವ ನಾಯಿ.

ಯೌವ್ವನ ಕಳೆದು ವೃದ್ಧಾಪ್ಯ ಬರಲೇಬೇಕು. ಅರಳಿದ ಹೂ ಸಂಜೆ ವೇಳೆಗೆ ಮುದುಡಿ ನೆಲ ಸೇರಲೇಬೇಕು. ಅದು ಪ್ರಕೃತಿ ನಿಯಮ. ಅದನ್ನು ತಡೆಗಟ್ಟಲು ಯಾರಿಂದಲೂ ಸಾಧ್ಯವಿಲ್ಲ. ಆದ್ದರಿಂದ

ಬಹಿರ್ಮುಖ ರೂಪ ಸೌಂದರ್ಯಕ್ಕಿಂತ ಅಂತರಮುಖ ಸೌಂದರ್ಯವನ್ನು ಹೆಚ್ಚಿಸಿಕೊಳ್ಳುವುದು ಸೂಕ್ತ ಎಂಬ ವಿಷಯವನ್ನು ತಮ್ಮ ಚಿತ್ರದ ಮೂಲಕ ಹೇಳಿದ್ದಾರೆ. ಇದು ಸುಭಾಷಿಣಿಯವರಲ್ಲಿದ್ದ ಆಧ್ಯಾತ್ಮ ಅಥವಾ ವೈರಾಗ್ಯದ ಗುಣಲಕ್ಷಣದ ಸಂಕೇತವಾಗಿದೆ. ಜಲವರ್ಣದ ಈ ಸಂಯೋಜನಾ ಚಿತ್ರ ಮೊದಲ ವೀಕ್ಷಣೆಗೆ ಯೌವ್ವನವತಿಯೋರ್ವಳು ವನದಲ್ಲಿ ನಿಂತಂತೆ ಕಾಣುತ್ತದೆಯಾದರೂ ಅದನ್ನು ಗಮನವಹಿಸಿ ನೋಡಿದಾಗ ಕಲಾವಿದೆಯಲ್ಲಿನ ಪ್ರಜ್ಞಾಪೂರ್ವಕ ತಿಳಿವು ಅದನ್ನು ದೃಶ್ಯವನ್ನಾಗಿಸುವಲ್ಲಿ ಪಟ್ಟ ಶ್ರಮ ಎದ್ದು ತೋರುತ್ತದೆ.

## ತಾಯಿ-ಮಗು

ತಾಯಿ ಮಕ್ಕಳ ಪ್ರೇಮ ಅಮರವಾದದ್ದು. ಅದಕ್ಕೆ ಬೆಲೆ ಕಟ್ಟಲಾಗುವುದಿಲ್ಲ. ಮನುಷ್ಯ ಮಾತ್ರವಲ್ಲ ದೇವ ದೇವತೆಗಳಲ್ಲೂ ತಾಯಿ ಮಕ್ಕಳು ಕುರಿತಂತೆ ಹಲವು ಪ್ರಸಂಗಗಳಲ್ಲಿ ಪ್ರಸ್ತಾಪ ಬಂದಿದೆ. ಶ್ರವ್ಯಕಾವ್ಯದ ಮೂಲಕ ಎಲ್ಲರ ಬಾಯಲ್ಲಿ ಗುನುಗುಟ್ಟುತ್ತವೆ. ಅದನ್ನೇ ದೃಶ್ಯವನ್ನಾಗಿಸಿದಾಗ ಕಾಣುವ ಸೊಗಸೇ ಬೇರೆ.

ಪಾರ್ವತಿಯು ಮಗು ಗಣಪನನ್ನು ತೊಡೆಯ ಮೇಲೆ ಮಲಗಿಸಿಕೊಂಡು ಹಾಲುಣಿಸುತ್ತಿರುವಂತೆಯೂ ಹಿನ್ನೆಲೆಯಲ್ಲಿ ಕೈಲಾಸವಾಸಿ ಶಿವನು ಆ ಗಿರಿ ಕಂದರಗಳ ಸೊಬಗಿನಲ್ಲಿಯೇ ಸ್ವರೂಪಿಯಾಗಿ ಆಶೀರ್ವದಿಸಿದಂತೆಯೂ, ಪಾರ್ವತಿ ಕುಳಿತಾಸನದ ತಳದಲ್ಲಿ ನಂದಿಯು ಮಂಡಿಯೂರಿ ಮಲಗಿದ್ದು, ಇಡೀ ಚಿತ್ರ ಪೌರಾಣಿಕ ಚಲನಚಿತ್ರವೊಂದರಲ್ಲಿ ಕಾಣುವ ಸೆಟ್ಟಿಂಗ್ಸ್‌ನಂತೆ ತೋರುತ್ತಿದ್ದು ಉತ್ತಮ ಸಂಯೋಜನೆಗೊಳಿಸಿದ್ದಾರೆ. ಇದೊಂದು ಕ್ಯಾಲೆಂಡರ್ ಚಿತ್ರದಂತೆ ತೋರಿದರೂ ಇದುವರೆಗೆ ಇಂತಹ ಕಲ್ಪನಾ ಚಿತ್ರ ಎಲ್ಲಿಯೂ print ಆದಂತೆ ತೋರುವುದಿಲ್ಲ.

## ಸಿದ್ಧಾರ್ಥನ ಪಯಣದ ಹಾದಿ

ಅಡಿಗಳ ಲೆಕ್ಕದಲ್ಲಿ ಕ್ಯಾನ್‌ವಾಸ್ ಮೇಲೆ ತೈಲ ಚಿತ್ರ ರಚಿಸುವುದಕ್ಕಿಂತ ಕಿರಿದಾದ ಕಾಗದದ ಮೇಲೆ ಜಲವರ್ಣದಲ್ಲಿ ಚಿತ್ರ ರಚಿಸುವುದು ಬಹಳ ಕಷ್ಟದ ಕೆಲಸ. ಅದರಲ್ಲೂ ಪಾರದರ್ಶಕ ಬಣ್ಣಗಳ ಬಳಕೆ (Transparent Colours) ಇನ್ನೂ ಕಷ್ಟ. ಕಲಾಭ್ಯಾಸವನ್ನು ವ್ಯವಸ್ಥಿತವಾಗಿ ಮಾಡಿ ಸಾಧನೆ ಮಾಡಿದವರಿಗೆ ಮಾತ್ರ ಸಾಧ್ಯವೆಂಬುದಕ್ಕೆ ಸುಭಾಷಿಣಿಯವರ ಸಿದ್ಧಾರ್ಥನ (ಬುದ್ಧ) ಪಯಣದ ಹಾದಿಯ ಚಿತ್ರ ಉತ್ತಮ ಉದಾಹರಣೆಯಾಗಿದೆ.

ನಾಲ್ಕು ಕುದುರೆಗಳುಳ್ಳ ರಥದಲ್ಲಿ ರಾಜಕುಮಾರ ಸಿದ್ಧಾರ್ಥ ಕುಳಿತು ಸಾಗುತ್ತಿರುವಾಗ ವೃದ್ಧಾಪ್ಯದ ಪರಮಾವಧಿ ಮುಟ್ಟಿದ ಮುದುಕ ಕೈಯಲ್ಲೊಂದು ಕೋಲು ಹಿಡಿದು ನಡುಬಾಗಿ ಸಾಗುತ್ತಿದ್ದು ಅವನ ಮತ್ತೊಂದು ಕೈಯಲ್ಲಿ ಭಿಕ್ಷಾನ್ನದ ಬೋಸಿಯನ್ನಿಡಿದಿರುವುದನ್ನು ನೋಡುತ್ತಾ ಬರುತ್ತಿದ್ದ ನಾಯಿಯೊಂದನ್ನು ಸಹ ಚಿತ್ರಿಸಿದ್ದಾರೆ.

ಇಲ್ಲಿ ಎರಡು ವೈರುಧ್ಯಗಳಿವೆ. ಒಂದು ರಾಜಭೋಗ ಮತ್ತೊಂದು ದರಿದ್ರಯೋಗ, ಜೀವನವೇನೆಂಬುದರ ಪರಿಚಯವಾದದ್ದು ಆಗಲೇ. ಕಥಾವಸ್ತು ಏನೇ ಇರಲಿ ಕಲಾವಿದೆ ಈ ಸನ್ನಿವೇಷವನ್ನು ಎಷ್ಟು ನಾಜೂಕಾಗಿ ಚಿತ್ರಿಸಿದ್ದಾರೆಂಬುದು ಮುಖ್ಯ. ಚಿತ್ರಗಳ ಅಳತೆ ಚಿಕ್ಕದಾಗಿದ್ದರೂ

ಎಲ್ಲಿಯೂ ಶರೀರಶಾಸ್ತ್ರ (Anatomy)ಗಳ ದೋಷವಿಲ್ಲ. ರಾಜಕುಮಾರನಿಗಿರಬೇಕಾದ ಅಂಗವಿನ್ಯಾಸ, ಮುಖಲಕ್ಷಣ, ಧರಿಸಿದ ವಸ್ತ್ರಾಭರಣ, ಚಾಲಕ ಮತ್ತು ಸಿದ್ಧಾರ್ಥನ ನಡುವಿನ ಅಂತರ ಮತ್ತು ಸಂಭಾಷಿಸುವ ಸಂದರ್ಭದ ಮುಖಚರ್ಯೆ ಕುಸುರಿ ಕೆಲಸಗಳುಳ್ಳ ರಥ ಹಾಗೆಯೇ ವೇಗದಲ್ಲಿ ಚಲಿಸುತ್ತಿದ್ದ ಕುದುರೆಗಳ ಲಗಾಮು ಎಳೆದಾಗ ಅವುಗಳ ವೇಗೋತ್ಕುಂಟಿತ ಸನ್ನಿವೇಶ, ಕುದುರೆಗಳ ಮೇಲೆಲ್ಲಾ ಧರಿಸಿದ ವಸ್ತ್ರಾಭರಣ, ನಾಲ್ಕು ಕುದುರೆಗಳು ಶ್ವೇತ ವರ್ಣವಾಗಿದ್ದರೂ ಅವುಗಳಲ್ಲಿ ಕಾಣುವ ವ್ಯತ್ಯಯ ವರ್ಣ ಸಂಯೋಜನೆ ಉತ್ತಮವಾಗಿವೆ. ಹಾಗೆಯೇ ದಾರಿಯಲ್ಲಿ ಸಾಗುವ ವೃದ್ಧನ ಚಿತ್ರವೂ ಸಹ ಕ್ಯಾಮರಾದಿಂದ ತೆಗೆದ ಚಿತ್ರದಂತೆ ನೈಜತೆಯಿಂದ ಕೂಡಿದ್ದು, ಅನುಪಮವಾದ ವರ್ಣ ಸಂಯೋಜನೆಗೊಳಿಸಿದ್ದಾರೆ. ಪಯಣ ಸಾಗುವ ಹಾದಿಯಲ್ಲಿನ ಭವನಗಳ ಮಾಡು, ದ್ವಾರ, ಕಲ್ಕಂಬಗಳಲ್ಲಿನ ಕುಶರಿ ಕೆಲಸ ಹಿತಮಿತವಾದ ನೆಳಲು ಬೆಳಕುಗಳ ಸಂಯೋಜನೆ ಇವೆಲ್ಲವನ್ನು ವೀಕ್ಷಿಸಿದಾಗ ಒಂದೆರಡು ದಿನದಲ್ಲಿ ರಚಿಸಿರುವ ಚಿತ್ರವಿದಲ್ಲ. ಈಗಿನ ಹಾಗೆ ನಾಲ್ಕೈದು ಅಡಿ ಕ್ಯಾನ್‌ವಾಸ್ ಮೇಲೆ ಒಂದೆರಡು ಗಂಟೆ ಅವಧಿಯಲ್ಲಿ ಚಿತ್ರಿಸುವಂತಹ ಚಿತ್ರವಲ್ಲವೆಂಬುದು ಯಾರಿಗಾದರೂ ಅರ್ಥವಾಗುತ್ತದೆ.

**ಭೂ ದೃಶ್ಯಗಳು**

ಸ್ವಾತಂತ್ರ ಪೂರ್ವದಲ್ಲಿ ತದನಂತರದ ಪೂರ್ವಾರ್ಧದಲ್ಲಿ ಅಂದರೆ 1940-50ರ ಸಂದರ್ಭದಲ್ಲಿ ಹೆಚ್ಚಿನ ಬೇಡಿಕೆ ಇತ್ತು. ಆಂಗ್ಲರು ಭಾರತದಲ್ಲಿ ವಾಸಿಸುತ್ತಿದ್ದಾಗ ಇಲ್ಲಿನ ಪರಿಸರ, ವಾತಾವರಣ, ಜನಜೀವನ ಮತ್ತು ದೇವಾಲಯಗಳ ಸುಮನೋಹರ ನೋಟಗಳ ಚಿತ್ರವನ್ನು ಖರೀದಿಸುತ್ತಿದ್ದರಾದ್ದರಿಂದ ಬಹುತೇಕ ಕಲಾವಿದರು ಭೂದೃಶ್ಯವನ್ನು (Landscape) ಹೆಚ್ಚಾಗಿ ಬರೆಯುತ್ತಿದ್ದರು. ಆದರೆ ಸುಭಾಷಿಣಿಯವರು ಮಾರಾಟಕ್ಕಾಗಿ ಚಿತ್ರಗಳನ್ನು ರಚಿಸದೇ ಸ್ವಸಂತೋಷಕ್ಕಾಗಿ ಬರೆದುದೇ ಹೆಚ್ಚು. ಅವರು ಚಾಮುಂಡಿ ಚಿತ್ರದ ತಪ್ಪಲನ್ನೇ ಕೇಂದ್ರವನ್ನಾಗಿಸಿಕೊಂಡು ಅಲ್ಲಿನ ಹಲವಾರು ದೃಶ್ಯಗಳನ್ನು ಜಲವರ್ಣದಲ್ಲಿ ಚಿತ್ರಿಸಿದ್ದಾರೆ. ಬೆಟ್ಟದ ಮೇಲಿನ ಬಸವಣ್ಣ, ಇತರ ಕಲಾವಿದರಿಗೆ ಸ್ಫೂರ್ತಿ ತಾಣವಾದಂತೆ ಸುಭಾಷಿಣಿಯವರಿಗೂ ಸಹ ಅಲ್ಲಿನ ಸೂರ್ಯೋದಯ ಮತ್ತು ಸಂಧ್ಯಾ ಸಮಯವನ್ನು ಸ್ಕೆಚ್ ಮಾಡಿಕೊಂಡು ಬಂದು ಅದಕ್ಕೆ ಬಣ್ಣಗಳಿಂದ ಚಿತ್ರಪೂರೈಸಿದ್ದಾರೆಂದು ಭಾಸವಾಗುತ್ತವೆ. ಅಲ್ಲಿನ ದೇವಾಲಯ ಮತ್ತು ಹೊರಗಿನ ಪರಿಸರವನ್ನು ಬೆಳಕಿನ ಚೆಲ್ಲಾಟದೊಡನೆ ಚಿತ್ರಿಸಿದ್ದಾರೆ. ಮುದ್ರಿತ ಛಾಯಾಚಿತ್ರವನ್ನು ನೋಡಿದ ಅನುಭವವಾಗುತ್ತದೆ. ಇದಲ್ಲದೆ ನಂಜನಗೂಡು ಅವರ ವಾಸಸ್ಥಳವೂ ಆಗಿದ್ದು, ಅಲ್ಲಿನ ಸ್ನಾನಘಟ್ಟಗಳು, ನದಿ ಹರಿಯುವ ದೃಶ್ಯ ಇವರ ನಿಸರ್ಗ ದೃಶ್ಯಗಳಲ್ಲಿ ಹೆಚ್ಚಾಗಿ ಕಂಡು ಬರುತ್ತವೆ.

**ಸರಸ್ವತಿ**

ಕಲೆಯನ್ನೇ ಜೀವನದುಸಿರನ್ನಾಗಿ ಮಾಡಿಕೊಂಡಿದ್ದ ಸುಭಾಷಿಣಿಯವರು ಸರಸ್ವತಿಯ ಸುಪುತ್ರರೆಂದೇ ಭಾವಿಸಿಕೊಂಡಿದ್ದರು. ಅವರು ಉಪಯೋಗಿಸುತ್ತಿದ್ದ ಸ್ವವಿಳಾಸ ಮುದ್ರಿತ ಪತ್ರದಲ್ಲಿ ಸಹ (Letterred) ಸರಸ್ವತಿ ಚಿತ್ರವನ್ನೇ ಛಾಪಿಸಿದ್ದರು. ಅನೇಕ ನಮೂನೆಗಳಲ್ಲಿ ಚಿತ್ರ ರಚಿಸಿದ್ದು, ಅದರಲ್ಲಿ ಸಿಂಹಾಸನದ ಮೇಲೆ ಕುಳಿತಿರುವ ವೀಣಾಪಾಣಿಯದು ಗಮನಸೆಳೆಯುತ್ತದೆ. ಶಿಲ್ಪ ಕೃತಿಯನ್ನು ನೋಡಿದ ಅನುಭವವಾದರೂ ಹಿನ್ನೆಲೆಯಲ್ಲಿ ಕುಶರಿ ಕೆಲಸದ ಕಲ್ಕಂಭ, ಪರದೆ ಮತ್ತು ಕುಳಿತಾಸನದ ತಳದಲ್ಲಿ

ಯಥಾದರ್ಶನ ನಿಯಮದಂತೆ (Perspective) ತೋರಿಸಿರುವ ನೆಲಹಾಸಿನ (Carpet) ರಚನೆಗಳ ಮೂಲಕ ನೈಜತೆಯ ಹೊಳಹು ಅರಿವಾಗುತ್ತದೆ.

ಚಿತ್ರದಲ್ಲಿನ ಆಭರಣಾಲಂಕಾರ, ವಸ್ತ್ರವಿನ್ಯಾಸ, ಕಿರೀಟದಲ್ಲಿ ನಿಜವಾದ ಹರಳನ್ನೇ ಮೆಟ್ಟಿರುವರೇನೋ ಎಂಬಂತೆ ಕುಂಚದಂಚಿನಿಂದ ಸ್ಪರ್ಶಿಸಿರುವ ಆ ಬಣ್ಣಗಳ ಬೆಡಗು, ಮುಖದ ಕಳೆ, ಕಣ್ಗಳು, ನಾದ ಸಮಯದಲ್ಲಿ ತಲ್ಲೀನವಾದಾಗ ನುಡಿಸುವಿಕೆಯತ್ತ ಗಮನಹರಿಸುವಂತೆ ಕಾಣುವ ಆ ನೋಟ, ನಾಲ್ಕು ಕೈಗಳುಳ್ಳ ಸರಸ್ವತಿಯಲ್ಲಿ ಎರಡು ಕೈಗಳು ನುಡಿಸುತ್ತಿದ್ದರೆ ಮತ್ತೆರಡು ಕೈಗಳು ಜಪಮಣಿ ಮತ್ತು ಓಲೆಗರಿ ಕಟ್ಟುಗಳನ್ನು ಹಿಡಿದಿರುವ ಆ ದೃಶ್ಯ ಸೊಗಸಿದೆ. ಬಲತೊಡೆಯ ಮೇಲೆ ಎಡಪಾದವಿದ್ದರೆ ಬಲಪಾದವು ಭೂಸ್ಪರ್ಶ ಮಾಡಿದೆ. ಸೀರೆಯ ನೆರಿಗೆ (Foldings) ಶಿಲ್ಪದಲ್ಲಿ ಕಡೆದಾಗ ಕಾಣುವ ನೋಟದಂತೆ ಭಾಸವಾಗುತ್ತದಾದರೂ ಬಣ್ಣಗಳ ಬೆಡಗಿನಿಂದ ತ್ರಿಮಾನಗಳ ಅರಿವುಂಟಾಗುವಂತೆ ರಚಿಸಿರುವ ವಿಧಾನ ಸೊಗಸಿದೆ.

ಮತ್ತೊಂದು ಚಿತ್ರ ಸರಸ್ವತಿಯಲ್ಲಿ ದೇಹದ ಮೇಲಿನ ವಸ್ತ್ರ ಗೌಣವಾಗಿದ್ದು ಆಭರಣಗಳೇ ಅಧಿಕವಾಗಿವೆ. ಬೇಲೂರಿನ ಶಿಲಾಬಾಲಿಕೆಯರನ್ನು ನೋಡಿದಾಗ ಕಾಣ್ಬ ರೀತಿಯಂತಿದ್ದು ರುದ್ರವೀಣೆಯನ್ನು ನುಡಿಸುವಂತಿದೆ. ಕುಳಿತಾಸನವು ಸಹ ತೀರಾ ಸರಳವಾದ ನಾಲ್ಕು ಪಾದಗಳುಳ್ಳ ಮಣೆಯಂತಿದೆ. ಹಿನ್ನೆಲೆಯ ಬಣ್ಣ ಮುಖದ ಕಾಂತಿಗೆ ಭಂಗ ಬಾರದಂತೆ ಪೋಷಕವಾಗಿದೆ. ಮುಖದ ಕಳೆ ತೋರಿಸುವಲ್ಲಿ ಆಲೋಚನಾ ಮಗ್ನವಾಗಿರುವಂತೆ ಕಣ್ಗಳ ನೋಟವಿದ್ದು ಭಾವಪ್ರದಾನವಾಗಿ ನುಡಿಸುವಂತಿದೆ. ಕೊರಳು, ಬಾಹು, ಮುಂಗೈ, ಕಟಿ ಮತ್ತು ಪಾದಗಳಲ್ಲಿನ ಆಭರಣಗಳ ವಿನ್ಯಾಸ, ಕೊರಳ ಬಳಸಿ ಬಂದಿರುವ ವೈಜಯಂತಿಹಾರ ಚಿತ್ರಕ್ಕೆ ಶೋಭೆ ತಂದಿದೆ. ಈ ಚಿತ್ರ ಮೈಸೂರು ದಸರಾ ವಸ್ತು ಪ್ರದರ್ಶನದ ಸಂದರ್ಭದಲ್ಲಿನ ಕಲಾಕೃತಿಗಳ ಕೈಪಿಡಿ (ಕ್ಯಾಟಲಾಗ್)ಯಲ್ಲಿ ಪ್ರಕಟವಾಗಿದೆ. ಬಹುಮಾನ ಗಳಿಸಿದೆ.

ಇವರ ಬಹುತೇಕ ಚಿತ್ರಗಳಲ್ಲಿ ಪೌರಾಣಿಕ ಆಶಯಗಳೇ ಅಧಿಕವಾಗಿದ್ದುದಕ್ಕೆ ಮತ್ತಷ್ಟು ಉದಾಹರಣೆ ನೀಡುವುದಾದರೇ ಪರಶುರಾಮನಲ್ಲಿ ಕರ್ಣನ ವಿದ್ಯಾಕಲಿಕೆ-ಪ್ರಸಂಗ, ದ್ರೋಣನ ಮೂರ್ತಿಯನ್ನಿಟ್ಟು ಕೊಂಡು ವಿದ್ಯೆ ಕಲಿತ ಏಕಲವ್ಯನ ಗುರುಭಕ್ತಿ, ಸಂತಳಾದ ಮೀರಾ ಕೃಷ್ಣನನ್ನು ಧ್ಯಾನಿಸುವ ಬಗೆ, ರಾಧೆ ಮತ್ತು ಕೃಷ್ಣರ ಅನ್ಯೋನ್ಯತೆ, ಶಕುಂತಲೆ ಮತ್ತು ಕಣ್ವಾಶ್ರಮದ ಸನ್ನಿವೇಶ, ಪರಮೇಶ್ವರನ ಪಂಚವಿಂಶತಿ ಲೀಲೆಗಳಾದ ಗಜಾಸುರ ಮರ್ದನ, ಲಿಂಗೋದ್ಭವ ಮೂರ್ತಿ, ವೃಷಭವಾಹನ ಪರಮೇಶ್ವರ, ಮಾರ್ಕಂಡೇಯ ದರ್ಶನ, ಅಂಧಕಾಸುರ ಸಂಹಾರ ಮುಂತಾದವು ಮೈಸೂರಿನ ಕಾಮಕಾಮೇಶ್ವರಿ ದೇವಾಲಯದಲ್ಲಿನ ಶಿಲ್ಪಗಳನ್ನೇ ಆಧರಿಸಿ ಚಿತ್ರ ರಚಿಸಿದಂತಿದೆ.

ಮೈಸೂರು ಶೈಲಿಯ ಅಂದರೆ ಸಂಪ್ರದಾಯ ಚಿತ್ರಕಲೆಯ ಉಬ್ಬೆತ್ತು ತಂದು ಚಿನ್ನದ ರೇಖನ್ನು ಅಂಟಿಸುವ ರಚನಾ ವಿಧಾನದಲ್ಲೂ, ಕೆಲವು ದೇವತೆಗಳ ಚಿತ್ರ ಮಾಡಿದ್ದು ಅವು ಆಪ್ತರ ಮನೆಯಂಗಳದಲ್ಲೋ ಅಥವಾ ಪೂಜಾಕೋಣೆಗಳಲ್ಲೋ ಬಂದಿಯಾಗಿದ್ದು ಕಲಾವಿದೆಯ ಹೆಸರು ಇಲ್ಲದಿರುವುದರಿಂದ ಗುರುತಿಸಲಾಗದಂತಾಗಿವೆ.

ಸುಭಾಷಿಣಿಯವರ ಚಿತ್ರಗಳ ಶೈಲಿ ಸಮೀಕ್ಷಿಸಿದಾಗ ಅವರು ಹೆಚ್ಚಾಗಿ ಜಲವರ್ಣಗಳನ್ನೇ ಬಳಸಿರುವುದು ಕಂಡು ಬರುತ್ತಾದರೂ ವೆಂಕಟಪ್ಪನವರಂತೆ ದೇಶೀಯ ಬಣ್ಣಗಳಿಗೆ ಅಂಟಿಕೊಳ್ಳದೇ

ವಿದೇಶಿ ಆಮದಾದ ವಿನ್ಸರ್ ನ್ಯೂಟನ್ ಬಣ್ಣಗಳನ್ನು, ಕುಂಚಗಳನ್ನು ಬಳಸಿದ್ದಾರೆ. ಚಾಕ್ಲೇಟನಂತೆ ಬರುತ್ತಿದ್ದ ಬಣ್ಣದ ಬಿಲ್ಲೆ ತೇಯ್ದು ಸಿದ್ಧಪಡಿಸಿಕೊಳ್ಳುತ್ತಿದ್ದ ಶ್ರಮ ಇಂದು ಇಲ್ಲವಾಗಿದೆ. ಸ್ವಾತಂತ್ರ್ಯಾನಂತರ ದೇಶಿಯ ವಸ್ತುಗಳಿಗೆ ಮಹತ್ವ ಕೊಡಬೇಕೆಂಬ ಎಚ್ಚರ ಜನರಲ್ಲಿ ಉಂಟಾಗುವುದಕ್ಕೆ ಆರಂಭಿಸಿದ ನಂತರ ಅವುಗಳ ಬರುವಿಕೆ ನಿಲುಗಡೆ ಆಗಿ ನಮ್ಮಲ್ಲಿ ಕ್ಯಾಮಲ್ ಕಂಪನಿ ತಲೆ ಎತ್ತಿತ್ತು. ಇಂದು ಬಣ್ಣಗಳಲ್ಲಿ ಎಣಿಸಲಾಗದಷ್ಟು ನಮೂನೆಗಳು ಬಂದಿವೆ, ಬರುತ್ತಲೂ ಇವೆ. ಮೂಲ ವರ್ಣಗಳಿಗೆ ಹತ್ತು ಹದಿನೈದು ಪಟ್ಟು ವಿಸ್ತರಣೆಗೊಂಡಿರುವ ಮಿಶ್ರವರ್ಣಗಳು ಮಾರುಕಟ್ಟೆಯಲ್ಲಿ ದೊರಕುತ್ತವೆಯಾದ್ದರಿಂದ ಕಲಾವಿದ್ಯಾರ್ಥಿಗಳು ಮೂಲವರ್ಣಗಳ ಕೂಡಿಸುವಿಕೆಯಿಂದ ಮತ್ತೊಂದು ವರ್ಣವನ್ನು ಪಡೆಯಬಹುದೆಂಬುದನ್ನೇ ಮರೆಯುವಂತಾಗುತ್ತದೆ.

ಇದೇನೆ ಇರಲಿ ಸುಭಾಷಿಣಿಯವರು ಸಹ 1980ರ ನಂತರದಲ್ಲಿ ಚಿತ್ರರಚನೆಗೆ ದೇಶಿಯವಾದ ಪೋಸ್ಟರ್ ಬಣ್ಣಗಳನ್ನೇ ಬಳಸುತ್ತಿದ್ದರು. ಜೀವಿತದ ಕೊನೆಯ ದಶಕದಲ್ಲಿ ಅವರ ದೇಹ ತನ್ನ ಹಿಡಿತವನ್ನು ಕಳೆದುಕೊಳ್ಳುತ್ತಾ ಬಂದಂತೆ ಕೈಗಳು ನಡುಗಲಾರಂಭಿಸಿದ್ದವು. ಆದರೆ ಕಲಾ ಬಯಕೆಗಳು ಇಮ್ಮಡಿ – ಮುಮ್ಮಡಿಯಾಗಿದ್ದವು.

**ಸಾಮಾಜಿಕ ಚಟುವಟಿಕೆ-ದೇಶಭಕ್ತಿ-ಕಾಂಗ್ರೆಸ್**

ಸುಭಾಷಿಣಿಯವರು ಸ್ವಾತಂತ್ರ ಚಳುವಳಿಯಲ್ಲಿ ಸಕ್ರಿಯವಾಗಿ ಧುಮಕಿ ಕಾರ್ಯನಿರ್ವಹಿಸದಿದ್ದರೂ ಅವರ ನಿರ್ವಾಜ್ಯ ದೇಶಪ್ರೇಮ ಮತ್ತು ಸಾಯುವವರೆಗೂ ಕಾಂಗ್ರೆಸ್ ಕಾರ್ಯಕರ್ತೆಯೇ ಆಗಿದ್ದುದು ಇತರರಿಗೆ ಅನುಕರಣೀಯ. ಮೈಸೂರಿನಲ್ಲಿದ್ದ ಮುಂಚೂಣಿ ಕಾಂಗ್ರೆಸ್ ನಾಯಕರೆಲ್ಲರನ್ನು ಬಲ್ಲವರಾಗಿದ್ದು ಅನೇಕ ಮಹಿಳಾ ಅಧಿವೇಶನಗಳನ್ನು ಸಂಘಟಿಸಿದವರು. ರಾಜ್ಯ ಮಟ್ಟದ ಸಮಾವೇಶದಲ್ಲಿ ಸ್ತ್ರೀಪರವಾದ ಕಾಳಜಿಗಳನ್ನು ಬಿಂಬಿಸಿ ಪುರುಷರಷ್ಟೇ ಸರಿಸಮಾನ ಸ್ಥಾನ ನೀಡಬೇಕೆಂದು ಪ್ರತಿಪಾದಿಸಿದರು.

ಮಹಿಳೆಯರ ಸ್ವಉದ್ಯೋಗಕ್ಕಾಗಿ ಇಲ್ಲವೇ ಕ್ಲಿಷ್ಟಕರ ಸನ್ನಿವೇಶಗಳಲ್ಲಿ ತಮ್ಮ ಸ್ವಂತ ಹಣವನ್ನೇ ನೀಡಿ ಕಾಂಗ್ರೆಸ್ ಹೆಸರನ್ನೇಳಿದ್ದಾರೆ. ದಿವಂಗತರಾದ ತುಳಸಿದಾಸಪ್ಪ, ಸಾಹುಕಾರ್ ಚೆನ್ನಯ್ಯ, ಕೆಂಗಲ್ ಹನುಮಂತಯ್ಯ, ಕಡಿದಾಳ್ ಮಂಜಪ್ಪ ಮುಂತಾದ ಅಗ್ರಮಾನ್ಯ ಕಾಂಗ್ರೆಸ್ ನಾಯಕರ ಜೊತೆಯಲ್ಲಿ ಕಾರ್ಯನಿರ್ವಹಿಸಿದರೂ ಎಂತಹ ಕಷ್ಟ ಬಂದಾಗ್ಯೂ ಕರ್ತವ್ಯ ವಿಮುಖರಾಗಲಿಲ್ಲ. ಕಾಂಗ್ರೆಸ್ ಎರಡಾಗಿ ಹೋಳಾದರೂ ಮೂಲ ಕಾಂಗ್ರೆಸಿಗರಾಗಿ ಗುರುತಿಸಿಕೊಂಡು ಬಂದವರು. ಸಂದರ್ಭಕ್ಕೆ ಅನುಗುಣವಾಗಿ ಪಕ್ಷಾಂತರ ಮಾಡಿದ್ದರೇ ಅವರು ಮಂತ್ರಿಯೇ ಆಗಬಹುದಿತ್ತು. ಹತ್ತಾರು ತಲೆಮಾರುಗಳಿಗಾಗುವಷ್ಟು ಸಂಪಾದಿಸಬಹುದಿತ್ತು. ಆದರೆ ಅವರ ಮನಸ್ಸು ದೈವಿಭಾವದತ್ತ, ಹಣ ಅಧಿಕಾರ ಶಾಶ್ವತವಲ್ಲವೆಂಬ ನಂಬಿಕೆ, ಪ್ರಾಮಾಣಿಕವಾಗಿ ನಡೆದುಕೊಳ್ಳಬೇಕೆಂಬಾಸೆ, ಇತರರ ಕಷ್ಟಕ್ಕೆ ಸಹಕಾರಿಯಾಗಿ ಅದರಲ್ಲೇ ಶಿವನನ್ನು ಕಾಣಬೇಕು ಎಂಬ ಹಿರಿಯರ ನುಡಿ. ಇಂತಹ ಗಟ್ಟಿ ನಿಲುವುಗಳಿಗೆ ಅಂಟಿಕೊಂಡಿದ್ದರ ಹಿನ್ನೆಲೆಯಲ್ಲಿ ಅವರ ಪಿತ್ರಾರ್ಜಿತ ಆಸ್ತಿ ನೀರು ಕರಗಿದಂತೆ ಕರಗಿ ಹೋಯಿತಾದರೂ ಅವರಿಗೆ ಅದರಲ್ಲೇ ತೃಪ್ತಿ ತಂದಿತ್ತು. ಆ ದೇವರು ಕೊಟ್ಟಿದ್ದ, ಅದನ್ನು ಹಿಂದಕ್ಕೆ ಪಡೆದಿದ್ದಾನೆ, ಇವಾವೂ ನನ್ನದಲ್ಲ. ನನ್ನದೆಂಬುದು ಯಾವುದೂ ಇಲ್ಲ. ಎಲ್ಲವೂ ಅವನಿಚ್ಛೆ. ಸೂತ್ರಧಾರ ಶಿವನು. ಅವನಾಡಿಸಿದಂತೆ ನಾವುಗಳು ಎಂಬ ಅಚಲತೆ. ಈ ಸಂದರ್ಭದಲ್ಲಿ ಕವಯಿತ್ರಿ ಮಹಾರಾಷ್ಟ್ರ ಗಡಿಭಾಗವಾದ ಸೊಲ್ಲಾಪುರದ ದಿ|| ಜಯದೇವಿ ತಾಯಿ ಲಿಗಾಡೆಯ ನೆನಪು ಬರುತ್ತದೆ. ಮುಸ್ಲಿಂ ರಜಾಕರ ಹಾವಳಿಗೆ ತುತ್ತಾಗಿ ಮನೆ ಮಠ ಕಳೆದುಕೊಂಡು

ಪರಿತಪಿಸುತ್ತಿದ್ದ ನಿರಾಶ್ರಿತರಿಗೆ ತಮ್ಮಲ್ಲಿದ್ದ ಸಾವಿರಾರು ಎಕರೆ ಭೂಮಿಯನ್ನು ಬದುಕಲು ಅವರಿಗೆ ಬಿಟ್ಟುಕೊಟ್ಟಿದ್ದು, ಬದುಕಲು ನೆಲೆ ಒದಗಿಸಿದುದು. ಸರ್ಕಾರದ ನೆರವನ್ನು ಕೇಳದೇ ಸ್ವಯಂ ಇಚ್ಛೆಯಿಂದ ಜನಪರವಾಗಿ ಕೆಲಸ ಮಾಡಿದುದು ಅವರ ಜೀವನದ ಮೈಲಿಗಲ್ಲಾದಂತೆ ಕಲಾವಿದೆ ಸುಭಾಷಿಣಿಯವರು ಸಹ ಪಿತ್ರಾರ್ಜಿತ ಆಸ್ತಿಯನ್ನು ಸಮಾಜಮುಖಿಯಾಗಿ ಕಲಾಕಾರಿಣಿಯಾಗಿ ಕಳೆದರೆಂಬುದು ನೆನೆಸಿಕೊಳ್ಳಬೇಕಾದ ಅಂಶವಾಗಿದೆ.

**ಆಕಾಶವಾಣಿ ಭಾಷಣಗಳು**

ಚಿತ್ರ, ಶಿಲ್ಪ, ಸಾಹಿತ್ಯ ಮತ್ತು ಸಮಾಜಸೇವೆ ಇವೆಲ್ಲವೂ ಒಂದೊಂದು ವಿಶಾಲ ವ್ಯಾಪ್ತಿಯುಳ್ಳವುಗಳಾಗಿದ್ದು, ಯಾವುದಾದರೊಂದರಲ್ಲಿ ಮಾತ್ರ ತೊಡಗಿಸಿಕೊಳ್ಳಲು ಸಾಧ್ಯ. ಎಲ್ಲದರಲ್ಲಿಯೂ ಕಾರ್ಯಸಾಧನೆ ಮಾಡಿದ್ದಾರೆಂದರೆ ಅಂತಹವರಿಗೆ ಅತ್ಯಂತ ಪ್ರಬಲವಾದ ಇಚ್ಛಾಶಕ್ತಿ, ಕಾರ್ಯಶಕ್ತಿ ಇರಲೇಬೇಕು. ಅಂತಹವರನ್ನು ಸಮಾಜ ಸದಾ ಸ್ಮರಿಸುತ್ತದೆಂಬುದಕ್ಕೆ ಸುಭಾಷಿಣಿಯವರ ಗುರುದ್ವಯರಾದ ವೆಂಕಟಪ್ಪನವರು ಮತ್ತು ಸಿದ್ಧಲಿಂಗಸ್ವಾಮಿಗಳು ಉದಾಹರಣೆಯಾಗುತ್ತಾರೆ.

ವೆಂಕಟಪ್ಪನವರನ್ನು ಚಿತ್ರಕಲಾವಿದರೆಂದೇ ಗುರುತಿಸಲ್ಪಟ್ಟರೂ ಅವರು ಪ್ಲಾಸ್ಟರ್‌ನಲ್ಲಿ ಮಾಡಿದ ಶಿಲ್ಪ ಸಂಗೀತದಲ್ಲಿ ಗಾಯನ ಮತ್ತು ವಾದನ, ಸ್ವತಃ ವೀಣೆಯನ್ನು ತಯಾರಿಸುವಿಕೆ ಹಾಗೆಯೇ ಸ್ವಾಮಿಗಳವರನ್ನು ಶಿಲ್ಪಿ ಎಂದೇ ಗುರುತಿಸಿದರೂ ಅವರಲ್ಲಿದ್ದ ವರ್ಣ ಚಿತ್ರಕಲೆ, ಸಂಸ್ಕೃತಪಾಂಡಿತ್ಯ, ಆಗಮಶಾಸ್ತ್ರ ಸಂಪನ್ನತೆ ಮೇಲಾಗಿ ಗುರುಕುಲ ಸ್ಥಾಪಿಸಿ ನೂರಾರು ವಿದ್ಯಾರ್ಥಿಗಳಿಗೆ ಶಿಲ್ಪಕಲಾ ತರಬೇತಿ ಇವೆಲ್ಲವೂ ವಿವಿಧ ಸ್ತರಗಳಲ್ಲಿ ಕೆಲಸ ಮಾಡಿದಂತಹವುಗಳಾಗಿವೆ.

ಕಲಾಸಾಹಿತ್ಯ ಮತ್ತು ಕಲೆ (Literature and Practical) ಇವೆರಡು ವಿಷಯಗಳನ್ನು ಅವಲೋಕಿಸಿದಾಗ ಇದುವರೆಗೆ ಕಲಾಶಾಲೆಗಳಿಂದ ಕಲಿತು ಬಂದ 95% ರಷ್ಟು ಕಲಾವಿದರಿಗೆ ಲೇಖನ ಸಾಹಿತ್ಯ ಗೌಣವಾಗಿರುತ್ತದೆ. ಭಾಷೆ ಒಂದು ಕಡ್ಡಾಯ ಕಲಿಕೆಯಾಗಿಲ್ಲದ ಕಾರಣ ಅನ್ಯಭಾಷಾ ಜ್ಞಾನವೂ ಕಡಿಮೆ. ಕಲಾಚರಿತ್ರೆ ಎಂಬ ವಿಷಯ ಪರೀಕ್ಷೆಗಳಿದ್ದರೂ ಅದು ಕೇವಲ ಉತ್ತೀರ್ಣತೆಗೆ ಅರ್ಹ ಅಂಕ (Passing Marks) ಗಳಿಕೆಗಷ್ಟೇ ಸೀಮಿತವಾಗಿವೆ. ಕಲಾಶಾಲೆಗಳು ಕರ್ನಾಟಕಾದ್ಯಂತ ಆರಂಭವಾಗಿ ಮೂರ್ನಾಲ್ಕು ದಶಕ ಕಳೆದರೂ ಒಂದು ನಿರ್ದಿಷ್ಟ ಪಠ್ಯ ವಿಷಯವಿಲ್ಲವೆಂಬುದು ಖೇದದ ಸಂಗತಿ. ಇನ್ನು ಪರಂಪರೆಯಿಂದ ಬಂದಂತಹ ಶಿಲ್ಪಿಗಳಿಂದ ತಯಾರಾದ ಪುತ್ರ ಪೌತ್ರರು ಮತ್ತಿತರ ಅಕ್ಷರ ಜ್ಞಾನವು ಸಹ ದೈನಂದಿನ ವ್ಯವಹಾರಕ್ಕೆ ಮಾತ್ರ ಅನುಗುಣವಾಗಿದೆಯೇ ವಿನಃ ಕಲಾಸಾಹಿತ್ಯ ಸಂವರ್ಧನೆಗಾಗಿ ಅಲ್ಲ. ಇಂತಹ ಅವ್ಯವಸ್ಥೆಯ ಆಗರವಾಗಿರುವ ಕಲಾಸಾಹಿತ್ಯವನ್ನು ತೀವ್ರವಾದ ಆಸಕ್ತಿಯುಳ್ಳವರು ಮಾತ್ರ ಬೆಳೆಸಿ ನಾಡಿಗೊಂದು ಸಾಹಿತ್ಯ ತಿಳುವಳಿಕೆ ಕೊಡಲು ಸಾಧ್ಯ ಎಂಬುದಕ್ಕೆ ಸುಭಾಷಿಣಿ ಅವರು ಉತ್ತಮ ಉದಾಹರಣೆಯಾಗುತ್ತಾರೆ.

ಅವರ ಕಲಾಸಾಹಿತ್ಯ ಗ್ರಂಥಸ್ಥವಾಗಿ ದಾಖಲಾಗದಿದ್ದರೂ ಪ್ರಚುರ ಪಡಿಸಿದ ಭಾಷಣ ಮತ್ತು ಲೇಖನಗಳು ಒಂದೊಂದು ಅಮೂಲ್ಯವೇ. 1950ರಿಂದ 1956ರವರೆಗೆ ಮತ್ತು 1980–86ರವರೆಗೆ ಚಿತ್ರ, ಶಿಲ್ಪ ಮತ್ತು ಸಂಸ್ಕೃತಿ ಸಂವರ್ಧನೆ ಕುರಿತಂತೆ ಹಲವಾರು ಭಾಷಣಗಳನ್ನು ಆಕಾಶವಾಣಿಯಲ್ಲಿ ಪ್ರಚುರ ಪಡಿಸಿದ್ದಾರೆ. ಉಪನ್ಯಾಸ ನೀಡಿದ್ದಾರೆ. 'ಮರೆಯಲಾಗದ ಮಹನೀಯರು' ಎಂಬ

ಮಾಲಿಕೆಯಲ್ಲಿ ಅನೇಕ ಕಲಾವಿದರರನ್ನು ಶಿಲ್ಪಿಗಳನ್ನು ಜನತೆಗೆ ಧ್ವನಿ ತರಂಗದ ಮೂಲಕ ಪರಿಚಯಿಸಿದ್ದಾರೆ.

ಆಕಾಶವಾಣಿ ಭಾಷಣಗಳು ಸಾಕಷ್ಟು ಸಂಖ್ಯೆಯಲ್ಲಿ ಆಗಿದ್ದರೂ ಅವುಗಳು ಲಭ್ಯವಾಗುತ್ತಿಲ್ಲವಾದ್ದರಿಂದ ಕೆಲವನ್ನು ದಾಖಲಿಸುವ ಪ್ರಯತ್ನ ಮಾಡಿದ್ದೇನೆ. ಹಾಗೆಯೇ ಪುಸ್ತಕದ ಪುಟದ ಮಿತಿಯಿರುವುದರಿಂದ ಭಾಷಣದಲ್ಲಿನ ಕೆಲವು ಮುಖ್ಯಾಂಶಗಳನ್ನು ಮಾತ್ರ ಇಲ್ಲಿ ದಾಖಲಿಸಲಾಗಿದೆ. ಓದುಗರು ಅವುಗಳ ಮೂಲಕ ಸುಭಾಷಿಣಿಯವರ ವೈಚಾರಿಕ ಶಕ್ತಿ, ಕಲಾಪ್ರಜ್ಞೆ ಇವುಗಳ ಆಳ ಅರಿವನ್ನು ತಿಳಿಯಬಹುದಾಗಿದೆ.

**ಆಕಾಶವಾಣಿ ಭಾಷಣ 21-06-1952**

ಕಲೆ ಪರಮೇಶ್ವರನ ಒಂದು ಅಂಗ. ಸಂಸ್ಕೃತಿ ಎಂಬುದು ಸಕಲ ಸದ್ಗುಣಗಳ ಸಮುಚ್ಚಯ. ಪುರಾಣ ಪೂರ್ವದಿಂದಲೂ ಕಲೆಗೆ ಮಹತ್ವವಿದೆ. ಜಗತ್‌ಸೃಷ್ಟಿಯಾಗುವ ಕಾಲದಲ್ಲಿ ವಿಶ್ವಕರ್ಮನಾದ ಆ ಪರಮೇಶ್ವರನ ಧ್ಯಾನದಲ್ಲಿ ಉಂಟಾದ ಕಲ್ಪನೆಯ ಪ್ರತಿಬಿಂಬವೇ ಈ ವಿಶ್ವದೊಳಗಿನ ಸೂರ್ಯ ಚಂದ್ರಾದಿ ಗ್ರಹಗಳು, ಪೃಥ್ವಿ, ಆಕಾಶ, ನದಿ, ಬೆಟ್ಟ, ಪರ್ವತ, ಸಾಗರಗಳು ಮತ್ತು ನಾನಾ ವಿಧದ ಜೀವರಾಶಿಗಳು.

ಪ್ರಪಂಚದಲ್ಲಿ ಉತ್ತಮ ಸಂಸ್ಕೃತಿ ಬೆಳೆಯಬೇಕಾದರೆ ಅದಕ್ಕೆ ಕಲೆಯೇ ಮುಖ್ಯ ಆಧಾರ. ಅದರಲ್ಲಿಯೂ ಶಿಲ್ಪಕಲೆ ಅತಿ ಮುಖ್ಯ. ಈ ಜಗತ್ತಿನಲ್ಲಿ ಗೋಚರಿಸತಕ್ಕದ್ದೆಲ್ಲವೂ ನಶ್ವರವಾದುದ್ದೇನೋ ಸರಿ. ಆದರೆ ಪರಮೇಶ್ವರನ ಸೃಷ್ಟಿಯಲ್ಲೆಲ್ಲಾ ಅತಿ ಗಟ್ಟಿಯು, ಗಾತ್ರವೂ ಆದ ಶಿಲೆಯಿಂದ ನಿರ್ಮಾಣವಾದ ವಸ್ತುಗಳು ದೀರ್ಘಕಾಲ ನಿಲ್ಲಬಲ್ಲದು. ಆದುದರಿಂದಲೇ ಪ್ರಾಜ್ಞರಾದ ನಮ್ಮ ಪ್ರಾಚೀನರು ಅವರವರ ಧ್ಯಾನದಲ್ಲಿ ಕಾಣುತ್ತಿದ್ದ ಭಾವಗಳನ್ನು ಆಕಾರಗಳನ್ನು ಶಿಲೆಯಲ್ಲಿ ನಿರ್ಮಿಸುತ್ತಿದ್ದರು. ಸಂಸ್ಕೃತಿಯು ಕಾಲಚಕ್ರಕ್ಕೆ ಸಿಕ್ಕಿ ಉರುಳುವಾಗ್ಗೆ ಭಿನ್ನ ಭಿನ್ನ ರೂಪವಾಗಿ ಮಾರ್ಪಾಟು ಹೊಂದುತ್ತದೆ. ಆದರೆ ತಪೋನಿಷ್ಠರು ಕಲಾ ಉಪಾಸಕರು ಆದ ಶಿಲ್ಪಿಗಳನ್ನು, ಉದಾರಿಗಳಾದ ರಾಜ ಮಹಾರಾಜರುಗಳನ್ನು ಪಡೆದ ಸಂಸ್ಕೃತಿಯು ಎಂದಿಗೂ ಅಳಿಯಲಾರದು. ಶಿಲ್ಪಿ ಎಂದರೆ ಕೇವಲ ಶಿಲೆಯನ್ನು ಹಿಡಿದು ಕೆಲಸ ಮಾಡುವವನಲ್ಲ, ಶಿಲ್ಪಕಲೆ ಎಂಬುದು ಅದ್ಭುತವಾದ ಬ್ರಹ್ಮವಿದ್ಯೆ. ಇದರಲ್ಲಿ ಸಂಗೀತ ಕಲೆ, ನೃತ್ಯ ಕಲೆ, ಸಾಹಿತ್ಯ ಕಲೆ, ವಾಸ್ತುಕಲೆ, ಚಿತ್ರಕಲೆ, ಜ್ಯೋತಿಶಾಸ್ತ್ರ, ಖಗೋಳಶಾಸ್ತ್ರ, ಗಣಿತಶಾಸ್ತ್ರ, ಪುರಾಣ, ಯಜ್ಞ ಯಾಗಾದಿಗಳು, ತಾಂತ್ರಿಕವಿದ್ಯೆ, ವೇದ ಆಗಮ, ಧರ್ಮಶಾಸ್ತ್ರ ಮುಂತಾದ ಎಲ್ಲಾ ವಿದ್ಯೆಗಳನ್ನೂ ಒಳಗೊಂಡಿರುವ ಶಿಲ್ಪಕಲೆಯನ್ನು ಯಾರು ಚೆನ್ನಾಗಿ ಅರಿತಿರುತ್ತಾರೋ ಅಂಥವರು ಮಾತ್ರ ಶಿಲ್ಪಿ ಎಂಬುದಕ್ಕೆ ಅರ್ಹನಾಗುತ್ತಾನೆ. ದೇಶದ ಸಂಸ್ಕೃತಿಯನ್ನು ಪ್ರಜ್ವಲಗೊಳಿಸುವಂತಹ ಸಮರ್ಥನಾಗುತ್ತಾನೆ.

ಶಿಲ್ಪಕಲೆಯಲ್ಲಿ ದೈವಶಿಲ್ಪ, ಮನುಷ್ಯಶಿಲ್ಪ ಎಂಬೆರಡು ವಿಧ. ದೇವತಾವಿಗ್ರಹ ಮತ್ತು ದೇವಾಲಯಗಳ ನಿರ್ಮಾಣಗಳಿಗೆ ದೈವಶಿಲ್ಪ ಎಂದು, ಮನುಷ್ಯ ರೂಪವನ್ನೇ ಪ್ರಧಾನವಾಗಿ ಮಾಡುವವರನ್ನು ರೂಪಶಿಲ್ಪಿಗಳೆಂದು ವರ್ಗೀಕರಿಸುತ್ತಾರೆ. ನಮ್ಮ ಭಾರತದ ಸಂಸ್ಕೃತಿಯು ಅನಾದಿಯಿಂದಲೂ ದೈವಭಕ್ತಿಯುಳ್ಳದ್ದು, ಆಧ್ಯಾತ್ಮ ವಿಚಾರ ಮಗ್ನವಾದುದು, ಪುರಾಣ ವೇದೋಪನಿಷತ್‌ಗಳಲ್ಲಿ ನಂಬಿಕೆಯುಳ್ಳದ್ದು ಉದಾರ ಮತ್ತು ವಿಶಾಲ ಮನೋಭಾವನೆಯುಳ್ಳದ್ದೂ ಆಗಿದೆ. ಪಾಶ್ಚಾತ್ಯ ದೇಶಗಳಲ್ಲಿ ಮನುಷ್ಯ ಶಿಲ್ಪವು ಅಲಂಕರಣಕ್ಕೆ ಮತ್ತು ಶೃಂಗಾರರಸ ಪ್ರತಿಪಾದನೆಗೆ ಆದ್ಯತೆ ನೀಡುವುದಾಗಿರುತ್ತದೆ.

ಪೂರ್ವಕಾಲದಲ್ಲಿ ನಮ್ಮ ದೇಶದ ರಾಜಾಧಿರಾಜರುಗಳು ತಮಗೆ ಪುತ್ರೋತ್ಸವವಾದರೆ ಅಥವಾ

ಯುದ್ಧದಲ್ಲಿ ಜಯ ದೊರೆತರೆ ಅದರ ಕುರುಹಾಗಿ ದೇವಾಲಯಗಳನ್ನು ಕಟ್ಟಿಸುತ್ತಿದ್ದರು. ಆಗಿನ ಕಾಲದಲ್ಲಿ ಸುಸಂಸ್ಕೃತರಾದ ರಾಜರುಗಳು ಪ್ರಜೆಗಳು ಕಲೆಗೆ ವಿಶೇಷವಾದ ಗೌರವ ಕೊಡುತ್ತಿದ್ದರು. ಅಂತೆಯೇ ಕಲಾವಿದರಿಗೂ ವಿಶೇಷ ಮನ್ನಣೆ ಕೊಡುತ್ತಿದ್ದರು.

ಕಲೆ ಸಾಗರಕ್ಕಿಂತ ಆಳವಾದದ್ದು, ಗಗನಕ್ಕಿಂತಲೂ ಉನ್ನತವಾದದ್ದೂ, ಸ್ಫಟಿಕದಂತೆ ನಿರ್ಮಲವಾದದ್ದು ಮತ್ತು ಸೂಕ್ಷ್ಮವೂ ಸುಮಧುರವೂ ಆದದ್ದು ಇದಕ್ಕೆ ಗಾತ್ರವಿಲ್ಲ, ವರ್ಣಾಶ್ರಮ ಭೇದವಿಲ್ಲ. ಯಾವ ದೇಶವಾಗಲೀ ಯಾವ ಮತವಾಗಲೀ ಮೊರೆಹೊಕ್ಕವರನ್ನು ಸಲಹುವ ಧರ್ಮದೇವತೆಯೇ ಕಲೆ.

ಸಾಮ್ರಾಟ್ ಅಶೋಕನ ಕಾಲದಲ್ಲಿ ಧರ್ಮಸಂದೇಶವನ್ನು ಸಾರುವ ಕಲಾಪ್ರಪೂರ್ಣವಾದ ಸ್ತೂಪಗಳನ್ನು, ಸ್ತಂಭಗಳನ್ನು ತದನಂತರದ ಗುಹಾಂತರ ದೇವಾಲಯಗಳನ್ನು ನೋಡಿದರೆ ಅವುಗಳ ವಿಷಯವಾಗಿ ಕಿಂಚಿತ್ ವಿಚಾರ ಮಾಡಿದಲ್ಲಿ ಆಗಿನ ಕಾಲ, ಸಂಸ್ಕೃತಿ, ಆಗಿನ ಜನಾಂಗದ ಮನೋಭಾವನೆ ಎಷ್ಟು ಉಚ್ಚಸ್ಥಾನವನ್ನು ಮುಟ್ಟಿತೆಂಬುದು ಸ್ಮರಣೆಗೆ ಬಾರದಿರದು.

ಕ್ರಿ.ಶ. 10-13ನೇ ಶತಮಾನದಲ್ಲಿ ಶಿಲ್ಪಕಲೆಯ ಪರಮಾವಧಿ ಮುಟ್ಟಿದ್ದನ್ನು ಕಾಣಬಹುದು. ಕೊನಾರ್ಕ್‌ನ ಸೂರ್ಯ ನಾರಾಯಣ ದೇವಾಲಯ, ಮೌಂಟ್ ಅಬುವಿನ ಅತಿ ಸುಂದರ ಜೈನ ದೇವಾಲಯ, ತಂಜಾವೂರಿನ ಬೃಹದೇಶ್ವರ ದೇವಾಲಯ, ಚಾಲುಕ್ಯ ಮತ್ತು ಹೊಯ್ಸಳರ ಅದ್ಭುತ ಶಾಸ್ತ್ರೀಯ ಕಲಾಸಂಪತ್ತು ಇಂತಹ ಹಲವಾರು ಉದಾಹರಿಸಬಹುದು. ಆಗಿನ ಕಾಲದಲ್ಲಿ ಜನತೆಗೆ ಶಿಲ್ಪಕಲೆಯಲ್ಲಿ ಅದೆಷ್ಟು ಅಭಿಮಾನ ಮತ್ತು ಭಕ್ತಿ ಇದ್ದಿರಬೇಕು ಎಂದೆನಿಸುತ್ತದೆ.

ಸಂಗೀತಗಾರ ಸಾಹಿತ್ಯದ ಸುಮಧುರ ಭಾವವನ್ನು ತನ್ನ ಗಾನದ ಮೂಲಕ ಶ್ರಾವಕರಿಗೆ ಆನಂದವನ್ನುಂಟು ಮಾಡುವುದಲ್ಲದೆ ಅವನನ್ನು ತನ್ನ ಗಾನದಲ್ಲಿ ಲೀನವಾಗುವಂತೆ ಮಾಡಿ ಭಕ್ತಿ ಸಾಮ್ರಾಜ್ಯದ ಶಿಖರಕ್ಕೆ ಕರೆದುಕೊಂಡು ಹೋಗಿ, ಕಲೆಯೇ ಸೌಂದರ್ಯ, ಸೌಂದರ್ಯವೇ ಸತ್ಯ, ಎಂಬ ಸಂದೇಶದ ತಿಳಿವನ್ನುಂಟು ಮಾಡುತ್ತಾನೆ. ಅದರಂತೆ ಶಿಲ್ಪಿ ತನ್ನ ಕಲಾಕೌಶಲದಿಂದ ನೋಡುವವರ ಕಣ್ಣುಗಳ ಮೂಲಕ ತನ್ನ ಕಾಲದ ಸಂಸ್ಕೃತಿಯ ಸಂದೇಶವನ್ನು ಬೀರುತ್ತಾನೆ. ಅವನ ಭೌತಿಕ ದೇಹ ಅಳಿದು ಕಾಲ ಉರುಳಿದಂತೆ ಅವನ ಕಲೆಯ ಜೀವನಾಡಿ ಎಲ್ಲರ ಜೀವನಾಡಿಯಂತೆ ಮಿಡಿದು ತನ್ನ ಸಾಂಸ್ಕೃತಿಕ ಸೌಖ್ಯವನ್ನು ಅನುಭವಿಸಲು ಎಳೆದೊಯ್ಯುತ್ತದೆ. ಇಂತಹ ಅನುಭವ ನಮ್ಮದಾಗಿರಲಿ.

**ಆಕಾಶವಾಣಿ ಮತ್ತಿತರ ನಿಯತಕಾಲಿಕೆಗಳಿಗೆ ಬರೆಯುತ್ತಿದ್ದ ಲೇಖನಗಳಲ್ಲಿ ಕಂಡು ಬಂದ ಪ್ರಮುಖ ವಾಕ್ಯಗಳು**

ಒಂದು ಚಿತ್ರವನ್ನು ಚಿತ್ರಿಸುವಾಗ್ಗೆ ಅದು ಸಂತೋಷ ಸನ್ನಿವೇಶವೇ ಆಗಲಿ, ದುಃಖ ಸನ್ನಿವೇಶವೇ ಆಗಲಿ ನಮ್ಮ ಮನಸ್ಸು ಆನಂದವಾಗಿ ಅಥವಾ ಅನ್ಯವಿಷಯಗಳಿಂದ ನಿರ್ಲಿಪ್ತವಾಗಿರಬೇಕು. ಹಾಗಿದ್ದಾಗ ಮಾತ್ರ ನಾವು ಚಿತ್ರಿಸಿದ ಚಿತ್ರಕ್ಕೆ ಜೀವಕಳೆ ತುಂಬುವುದು ಮತ್ತು ನಮ್ಮ ಧ್ಯೇಯವೂ ಸಫಲವಾಗುವುದು. ಹಾಗಿಲ್ಲದೇ ಮನಸ್ಸು ಅನ್ಯಗತವಾಗಿದ್ದಲ್ಲಿ ಚಿತ್ರವು ಎಷ್ಟೇ ಅಂದವಾಗಿದ್ದಾಗ್ಯೂ ಅದರಲ್ಲಿ ಕಿಂಚಿತ್ತು ಜೀವಕಳೆಯಿಲ್ಲದೆ ಸಪ್ಪೆಯಾಗುವುದು. ಚಿತ್ರಕಲೆಗೆ ಮನಸ್ಸಿನ ಏಕಾಗ್ರತೆಯೇ ಜೀವನಾಡಿ.

ಪ್ರಪಂಚದಲ್ಲಿ ತಂದೆ ತಾಯಿ ಶೇಖರಿಸಿಡುವ ನಿಧಿಯು ಮಕ್ಕಳಿಗೊದಗುವಂತೆ ನಮ್ಮ ಪ್ರಾಚೀನರು ಶೇಖರಿಸಲ್ಪಟ್ಟಿರುವ ಕಲಾನಿಧಿಯು ಈಗ ನಮಗೊದಗುತ್ತಿದೆ. ಈ ಮಾತಿಗೆ ಸಾರಾನಾಥ, ಸಾಂಚಿ, ಅಜಂತಾ, ಎಲ್ಲೋರ ಮುಂತಾದವುಗಳು ನಿದರ್ಶನಗಳಾಗಿವೆ (20-03-1951).

ಒಬ್ಬ ಚಿತ್ರಕಾರನು ಒಂದು ಚಿತ್ರವನ್ನು ಅಂದರೆ ಪುರಾಣದ್ದೋ, ರಾಮಾಯಣ, ಮಹಾಭಾರತಗಳದ್ದೋ, ಬುದ್ಧನ ಜೀವನ ವಿಚಾರಗಳೋ ಅಥವಾ ಇತಿಹಾಸಕ್ಕೆ ಸಂಬಂಧಪಟ್ಟ ಯಾವುದಾದರೊಂದು ಸನ್ನಿವೇಶವನ್ನು ಚಿತ್ರಿಸಲು ಉದ್ದೇಶಪಟ್ಟಾಗ ಅವನು ಭಾವನಾ ಪ್ರಪಂಚದಲ್ಲಿ ಮುಳುಗಿ ಆ ಚಿತ್ರಕ್ಕೆ ಸಂಬಂಧಿಸಿದ ಕಾಲ, ನಾಗರಿಕತೆ, ಉಡುಪು ಇವುಗಳನ್ನು ದೀರ್ಘವಾಗಿ ಆಲೋಚಿಸಿ, ವಿಮರ್ಶಿಸಿ ನಂತರ ಬಾಹ್ಯ ಪ್ರಪಂಚಕ್ಕೆ ಬಂದು ಅದರ ಪ್ರತಿಯನ್ನು ಒಂದು ಕ್ಯಾನ್‌ವಾಸ್ ಅಥವಾ ಕಾಗದದ ಮೇಲೆ ಚಿತ್ರಿಸುತ್ತಾನೆ. ಆ ವೇಳೆಯಲ್ಲಿ ಅವನಿಗುಂಟಾಗುವ ಆನಂದವು ಆತೀತವಾದದ್ದು. ಈ ಆನಂದದ ಸವಿಯು ಅನುಭವಿಸಿದವರಿಗಲ್ಲದೇ ಇತರರಿಗೆ ಅರಿವಾಗಲಾರದು. ಅದರಂತೆಯೇ ಪ್ರೇಕ್ಷಕರಲ್ಲಿಯೂ ಚಿತ್ರಕಲೆಯನ್ನು ನೋಡಿ ಅದರ ಸೂಕ್ಷ್ಮತೆಯನ್ನು ಗ್ರಹಿಸಿ ವಿಮರ್ಶಿಸುವವರು ಅತಿ ವಿರಳವಾಗಿದ್ದಾರೆ. (20-03-1951)

ಜೀವಿತವನ್ನೇ ಸಮರ್ಪಣೆ ಮಾಡಿ ಕಲಾ ಉಪಾಸನೆಗೈಯುವುದೇ ಪರಮಾತ್ಮನ ಉಪಾಸನೆ. ತಾತ್ಕಾಲಿಕ ಪ್ರತಿಫಲಗಳನ್ನು ಅಪೇಕ್ಷಿಸದೇ ಆತ್ಮನಿಗುಂಟಾಗುವ ತೃಪ್ತಿಯೊಂದನ್ನೇ ಪ್ರತಿಫಲವನ್ನಾಗಿ ಭಾವಿಸಿ ನಡೆದುಕೊಳ್ಳುವುದೇ ನಿಜವಾದ ಕಲೆ. (21-03-1951)

ಮಾನವೀಯತೆಗೂ ಕಲೆಗೂ ಇರುವ ಸಂಬಂಧವು ಬಿಡಿಸಲಾರದಷ್ಟು ಹೆಣೆದುಕೊಂಡಿದೆ. ಬಹುಪಾಲು ಜನರು ಕಿಂಚಿತ್ತು ವಿಚಾರ ಮಾಡದೇ ಕಲೆಗೂ ನಮಗೂ ಸಂಬಂಧವೇನು ಎನ್ನುತ್ತಾರೆ. (21-03-1951)

ತಪಸ್ಸಾಧನೆಗೆ ನಿರ್ಜನವಾದ ಶಾಂತವಾತಾವರಣ ಹೇಗೆ ಅಗತ್ಯವೋ ಹಾಗೆಯೇ ಕಲೆಗಾರ ಭಾವೋತ್ಪನ್ನಕ್ಕೂ ನಿರ್ಜನ ಪ್ರದೇಶವು ಶಾಂತವಾತಾವರಣವೂ ಅಗತ್ಯ. (30-06-1952)

ಉತ್ತಮ ಭಾವನೆಗಳು ಅಂತರಂಗದಲ್ಲಿ ಉದ್ಭವಿಸಬೇಕಾದರೆ, ದೇಹೇಂದ್ರಿಯಗಳ ಮೇಲಿನ ಅಭಿಮಾನವನ್ನು ತ್ರಿಕರಣ ಶುದ್ಧಿಯಾಗಿ ದೂರಮಾಡಿ ಸರ್ವದಾ ಕಲೋಪಾಸನೆಯಲ್ಲಿಯೇ ಮಗ್ನವಾಗಿ ಅದೇ ಚಿಂತನೆಯಲ್ಲೇ ತೊಳಲುತ್ತಿದ್ದರೆ, ಅದ್ಭುತವಾದ ಭಾವನೆಗಳು, ಆಕಾರಗಳು, ಅಂತರಂಗದಲ್ಲಿ ಧಾರಾಕಾರವಾಗಿ ಉತ್ಪನ್ನವಾಗುವುದೆಂಬುದರಲ್ಲಿ ಯಾವ ಸಂಶಯವೂ ಇಲ್ಲ. (30-06-1952)

ನಮ್ಮ ಕೃತಿಗಳು ಮುಂದಿನ ಜನಾಂಗಕ್ಕೆ ನಮ್ಮ ಕಾಲದ ಸಂಸ್ಕೃತಿಯ ದರ್ಪಣವಾಗಿ ನಿಲ್ಲಬೇಕು. (19-02-1954)

ಕಲಾಭ್ಯಾಸಿಗಳಿಗೆ ಅಮೂಲ್ಯವಾದ ವಸ್ತುವೆಂದರೆ ಕಾಲಾವಕಾಶ. ಇದನ್ನು ಕಳೆದುಕೊಂಡರೆ ಜನ್ಮಾಂತರದ ಪುಣ್ಯ ವಿಶೇಷದಿಂದ ಪ್ರಾಪ್ತವಾಗಿರುವ ಕಲಾತ್ಮಕ ಜನ್ಮವೇ ವ್ಯರ್ಥವಾದಂತಾಗುವುದು. (19-02-1954)

ಕವಿಯು ತಾನು ಕಂಡ ಕಲ್ಪನಾ ದೃಶ್ಯಗಳ ಅನುಭವವನ್ನು ಕಾವ್ಯದ ಮೂಲಕ ವಿವರಿಸಿ ವಾಚಕನನ್ನು ಕಲ್ಪನಾ ಲೋಕಕ್ಕೆ ಸೆಳೆಯುತ್ತಾನೆ. ಶಿಲ್ಪಿಯು ಅಥವಾ ಕಲಾವಿದನು ತಾನು ಭಾವನಾ ಲೋಕದಲ್ಲಿ ಕಂಡ ಆ ದೇವ ದೇವತೆಗಳ ದಿವ್ಯ ಸ್ವರೂಪವನ್ನು ತನ್ನ ಕಲೆಯ ಮೂಲಕ ನಿರೂಪಿಸಿ ದೃಶ್ಯವಾಗಿಸುತ್ತಾನೆ.

ಭಾವನಾ ಉತ್ಪನ್ನಕ್ಕೆ ಶಾಂತ ವಾತಾವರಣ ಅತ್ಯಗತ್ಯ. (19-02-1954)

ಈಗೀಗ ಚಿತ್ರಕಲೆಯು ಅನೇಕ ವಿಧವಾಗಿ ಬೆಳೆದಿದೆ. ಹೊಟ್ಟೆಪಾಡಿನ ಚಿತ್ರಕಲೆ, ಆಡಂಬರದ ಚಿತ್ರಕಲೆ, ಹೆಸರುಗಳಿಸಿ ತೃಪ್ತಿಪಡುವ ಚಿತ್ರಕಲೆ, ದೇಶ ಆಚಾರ ಕಾಲಧರ್ಮಗಳ ತಿಳುವಳಿಕೆ ಇಲ್ಲದ ಚಿತ್ರಕಲೆ ಇಂತಹುವುಗಳನ್ನು ಕಲೆ ಅನ್ನುವುದಕ್ಕೆ ನನಗೆ ಬಾಯಿ ತಡೆಯುತ್ತದೆ. (25-02-1954)

ಭಾರತೀಯ ಚಿತ್ರಗಳಲ್ಲಿ ಕಾಣುವುದು ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ಶಾಂತಿ, ಅಹಿಂಸೆ ಮತ್ತು ಅಭಯ. ಇಂತಹ ಸತ್ವಪೂರಿತ ಕಲೆಯನ್ನು ಹೊಂದಿದ ಜನರೇ ಪುಣ್ಯಾತ್ಮರು. ಭಾರತ ದೇಶವೇ ಕಲೆಗೆ ಮಾತೃಸ್ಥಾನ ಎನ್ನುತ್ತಾನೆ ಐರ್ಲೆಂಡಿನ ಇ.ಬಿ. ಹ್ಯಾವೆಲ್ (20-03-1951)

**"ಮರೆಯಲಾಗದ ಮಹನೀಯರು" ಮಾಲಿಕೆಯಲ್ಲಿ ಆಕಾಶವಾಣಿಯಲ್ಲಿ ವೆಂಕಟಪ್ಪನವರನ್ನು ಕುರಿತು 21-01-1985**

ಉರುಳುವ ಕಾಲಚಕ್ರಕ್ಕೆ ಸಿಕ್ಕಿ ಸಂಸ್ಕೃತಿಯು ಎಷ್ಟೋ ಅವಶೇಷಗಳ ಅಡಿಯಲ್ಲಿ ಅಗೋಚರವಾಗಿ ಬಿಡುತ್ತದೆ. ಆದರೆ ಅತ್ಯುತ್ತಮ ಚಿತ್ರಕಲಾವಿದರು, ಕವಿಗಳು, ಶಿಲ್ಪಿಗಳು, ಸಂಗೀತಗಾರರು ಅವರವರ ಸಾಧನೆಯ ಫಲದಿಂದ ರಚಿತವಾದ ಕಲಾಕೃತಿಗಳು, ಭವ್ಯಸ್ಮಾರಕಗಳು ಅಂದಿನ ತಲೆಮಾರಿನ ಅಥವಾ ಆ ಶತಮಾನಗಳಲ್ಲಿ ಸಂಸ್ಕೃತಿ ಯಾವ ಅಂತಸ್ತಿನಲ್ಲಿತ್ತು ಎಂಬುದನ್ನು ಬಿಂಬಿಸುತ್ತದೆ. ಆದುದರಿಂದ ಕಲಾವಿದರು ಚಾರಿತ್ರಿಕರು ಹಾಗೂ ರಾಜ್ಯವನ್ನಾಳುವವರು ಸಂಸ್ಕೃತಿಯನ್ನು ರಕ್ಷಿಸುವ ಹೊಣೆಗಾರಿಕೆ ಹೊತ್ತಿರುತ್ತಾರೆ. ಜೊತೆಗೆ ಸಂಸ್ಕೃತಿ ಸಂರಕ್ಷಣೆಯಲ್ಲಿ ತಮ್ಮದೇ ಆದ ಛಾಪನ್ನುಳಿಸಿ ಚಿತ್ರಕಲಾವಲಯದಲ್ಲಿ ಸದಾ ನೆನಸುವಂತೆ ಮಾಡುತ್ತಾರೆ. ಅಂತಹವರಲ್ಲಿ ಈರ್ವರು ಮಹಾನ್ ಕಲಾವಿದರೆಂದರೆ ಕೆ. ವೆಂಕಟಪ್ಪನವರು (1886-1965) ಮತ್ತು ಸಿದ್ಧಲಿಂಗ ಸ್ವಾಮಿಗಳು (1885-1952) ಇಂದಿನ ವಿಷಯ ಕೆ.ವೆಂಕಟಪ್ಪನವರನ್ನು ಕುರಿತದ್ದು.

ನನ್ನ ಕಲಾಗುರುಗಳಾದ ವೆಂಕಟಪ್ಪನವರು ಮಿತಭಾಷಿ. ಶಿಸ್ತು ಜೀವನ, ಕಲೆಯಿಂದ ಹೊರತಾದ ಸಂಭಾಷಣೆ ಇಲ್ಲ, ಹಾಗೆಯೇ ಕಲಾಸಾಧಕರಲ್ಲದವರ ಸ್ನೇಹವೂ ಇಲ್ಲ. ಅವರು ಯಾವಾಗಲೂ ತಮ್ಮ ಹೊರಗಿನ ಇಂದ್ರಿಯಗಳನ್ನು ಮುಚ್ಚಿ ಅಂತರಿಂದ್ರಿಯಗಳನ್ನು ಜಾಗೃತಗೊಳಿಸಿಕೊಂಡಿದ್ದವರು. ಒಂದು ದೃಶ್ಯವನ್ನು ಬರೆಯಲು ಆರಂಭಿಸಿದಾಗ ಅದರೊಳಗೆ ಪರಕಾಯ ಪ್ರವೇಶ................ ಸರಳವಾಗಿ ಹೇಳುವುದಾದರೆ ಹಾಲು ಮತ್ತು ನೀರು ಬೆರೆತಂತೆ ಇನ್ನಾರಿಗೂ ಪ್ರವೇಶವಿಲ್ಲ, ಗಾಢಮೌನ.

ಅವರ ಉಡುಗೆ ತೊಡುಗೆ ಎಲ್ಲವೂ ಕನ್ನಡ ಸಂಸ್ಕೃತಿಯನ್ನು ಎತ್ತಿ ತೋರಿಸುವಂತಹದ್ದು. ಒಳ್ಳೆಯ ನೇಪಲ್ಸ್ ಯಲ್ಲೋ (Nepalas Yellow)ಬಣ್ಣ, ನಯವಾಗಿ ಕ್ಷೌರ ಮಾಡಿದ ತಲೆ, ಹಿಂದು ಸಂಸ್ಕೃತಿಯ ಸಂಕೇತವಾದ ಚಿಕ್ಕದಾದ ಚೊಕ್ಕವಾದ ಜುಟ್ಟು, ತಿದ್ದಿ ತೀಡಿದ ಮೀಸೆ ಒಟ್ಟಿನಲ್ಲಿ ಹೇಳುವುದಾದರೇ ಅವರ ನಿಲುವೇ ಒಂದು ಕಲಾಕೃತಿ ಅಥವಾ ಸ್ಟಾಚ್ಯು ಇದ್ದ ಹಾಗೆ.

ಒಂದೇ ತೆರವಾದ ಉಡುಪು ಧಾರಣೆ, ನಿಶ್ಚಲವಾದ ಮನಸ್ಸು ಶ್ರೀಮದ್ ಗಾಂಭೀರ್ಯವುಳ್ಳ ನಡವಳಿಕೆ, ಪ್ರಕಾಶಮಾನವಾದ ಕಣ್ಣುಗಳು, ಯಾವಾಗಲೂ ಅವರ ಅಂತರ್ಯದಲ್ಲಿ ಸೆರೆಹಿಡಿದ ಯಾವುದೋ ಒಂದು ಅಲೌಕಿಕ ದೃಶ್ಯದಲ್ಲಿ ದೃಷ್ಟಿಯನ್ನು ನೆಟ್ಟು ಆನಂದಮಯವಾಗಿರುತ್ತಿದ್ದರು. ಸಾಮಾನ್ಯ ಜನರು ಇವರನ್ನು ''ಜನರ ಜೊತೆ ಸೇರುವುದಿಲ್ಲ, ಬಹಳ ಕೋಪಿಷ್ಟರು'' ಎಂದು ಹೇಳಿಕೊಳ್ಳುತ್ತಿದ್ದಾರೆ. ಇದು ತಪ್ಪು ಎಂಬುದು ನನ್ನ ಭಾವನೆ.

ಕಲೆಗಾರನಿದ್ದರೆ ಅವರೊಡನೆ ಸಂಭಾಷಿಸುವುದರಿಂದ ಕಲೆಯಲ್ಲಿನ ದೋಷವನ್ನು ತಿದ್ದಿಕೊಳ್ಳಲು ಸಹಾಯಕವಾಗುತ್ತಾರೆ. ಇಲ್ಲವೇ ಕಲಾರಚನೆಗೆ ಬೇಕಾದ ಪ್ರೋತ್ಸಾಹ ನೀಡುವವರಿದ್ದರೇ ಮತ್ತಷ್ಟು ಕಲೆ ಬೆಳೆಯಲು ಸಹಕಾರಿಯಾಗುತ್ತಾರೆ. ಇವೆರಡು ಇಲ್ಲದೆ ಸುಮ್ಮನೆ ಮಾತಾಡುವವರಿಂದ ಸಮಯದ ವ್ಯಯವಲ್ಲದೇ ಮತ್ತೇನು? ಸಮಯ ವ್ಯಯಿಸುವುದಕ್ಕಾಗಿಯೇ ಇರುವ ಜನರ ಬಳಿಯಲ್ಲಿ ಹೋಗಲಿ, ನನ್ನ ಬಳಿಯಲ್ಲಿ ಸ್ಥಳವಿಲ್ಲ ಎಂಬುದು ತಪ್ಪೇ? ನೋಡಿ ಇಂದು ನಾನು ಆಕಾಶವಾಣಿಯಲ್ಲಿ ಮಾತನಾಡುತ್ತಿದ್ದೇನೆ. ಕೊಟ್ಟಿರುವ ವಿಷಯವನ್ನು ನಿಗದಿಯಾದ ಸಮಯದಲ್ಲಿ ಮಾತಾಡಬೇಕಲ್ಲದೇ ಅನ್ಯ ವಿಷಯಗಳನ್ನು ಮಾತಾಡಿದರೇ ಶ್ರೋತೃಗಳಾದ ತಾವುಗಳು ಏನೆನ್ನುವಿರಿ? ನೀವೇ ಯೋಚಿಸಿ.

ಬೆಂಕಿಗೆ ಬೆಲ್ಲ ಕರಗುತ್ತದೆ. ಹುಳಿ ಬಿದ್ದಾಗ ಹಾಲು ಒಡೆಯುತ್ತದೆ ಎಂಬ ವಿಚಾರ ಎಲ್ಲರಿಗೂ ತಿಳಿದದ್ದೆ. ಅವುಗಳನ್ನು ಬೇರೆ ಬೇರೆ ಸ್ಥಳಗಳಲ್ಲಿ ಇಟ್ಟಾಗ ಯತಾಸ್ಥಿತಿಯಲ್ಲಿಯೇ ಉಳಿಯುತ್ತದೆ, ಉಪಯುಕ್ತವಾಗುತ್ತದೆ. ಈ ತತ್ವವನ್ನರಿತೇ ವೆಂಕಟಪ್ಪನವರು ತಮ್ಮ ತನವನ್ನು ಕಾಯ್ದುಕೊಳ್ಳಲಿಕ್ಕಾಗಿ ಯಾವ ಹೆಣ್ಣು ಮಕ್ಕಳನ್ನು ಸನಿಹ ಸೇರಿಸುತ್ತಿರಲಿಲ್ಲ, ಮಾತನಾಡುತ್ತಿರಲಿಲ್ಲ.

ವೆಂಕಟಪ್ಪನವರು ಯಾವುದಾದರೊಂದು ವಿದ್ಯೆ ಅಥವಾ ಕೆಲಸ ಆರಂಭಿಸಿದರೇ ಅದನ್ನು ಅಮೂಲಾಗ್ರವಾಗಿ ತಿಳಿದು ಅದನ್ನು ಚಿತ್ರಿಸುತ್ತಿದ್ದರು. ಆ ತಿಳುವಳಿಕೆ ಪಡೆಯಲು ಸತತವಾದ ಪರಿಶ್ರಮ ಪಡುತ್ತಿದ್ದರಾದ್ದರಿಂದ ಸಮಯವೆಂಬುದು ಅವರ ಪಾಲಿಗೆ ಬಹಳ ಅಮೂಲ್ಯ ವಸ್ತುವಾಗಿದ್ದಿತು. ಕಳೆದು ಹೋದ ಹಣವನ್ನಾದರೂ ಸಂಪಾದಿಸಬಹುದು.ಕಳೆದು ಹೋದ ಸಮಯವನ್ನು ಪಡೆಯಲಿಕ್ಕಾಗುವುದಿಲ್ಲವಾದ್ದರಿಂದ ಸಮಯಕ್ಕೆ ಅತಿಯಾದ ಮಹತ್ವ ನೀಡುತ್ತಿದ್ದರು. ಅನ್ಯ ವಿಷಯಗಳಿಗೆ ಅವಕಾಶ ನೀಡುತ್ತಿರಲಿಲ್ಲ, ಇವೆಲ್ಲವೂ ತಪ್ಪೇ? ಇಂತಹ ಅನೇಕ ವಿಚಾರಗಳನ್ನು ವೆಂಕಟಪ್ಪನವರ ಬಗ್ಗೆ ಇರುವ ಜನಾಭಿಪ್ರಾಯ ಕುರಿತು ಮಾತನಾಡಬಹುದಾದರೂ ನನ್ನ ನಿಗದಿತ ಸಮಯ ಸಮೀಪಿಸುತ್ತಿದೆಯಾದ್ದರಿಂದ. ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಕೊಟ್ಟ ಪ್ರೋತ್ಸಾಹ, ಕಲಾರಚನೆ ಮಾಡುತ್ತಿದ್ದ ಸ್ಥಳ. ಕೊನೆಯದಾಗಿ ನನ್ನ ಅವರ ಗುರುಶಿಷ್ಯ ಅನ್ನುವುದಕ್ಕಿಂತ ನನ್ನ ತಂದೆಯ ಸ್ನೇಹ ಕುರಿತು ಒಂದೆರಡು ಮಾತನ್ನು ಹೇಳಲಿಚ್ಛಿಸುತ್ತೇನೆ.

ಶ್ರೀಮನ್ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಕಲಾಪ್ರೇಮಿ. ಅವರ ಕಾಲದಲ್ಲಿಯೇ ಈಗ ಕಾಣುತ್ತಿರುವ ಹೊಸ ಅರಮನೆ ನಿರ್ಮಾಣವಾದದ್ದು, ಅದರ ಸೌಂದರ್ಯವರ್ಧನೆಗೆ ಅನೇಕ ಕಲಾವಿದರನ್ನು ಶಿಲ್ಪಿಗಳನ್ನು ನೇಮಿಸಿಕೊಂಡಿದ್ದರು. ಅದರಲ್ಲಿ ಕೆಲವರು ಆಪ್ತ ಕಲಾವಿದರು ಇದ್ದರು. ವೆಂಕಟಪ್ಪನವರು ಆಪ್ತ ವಲಯದವರಾದರೂ ತಮ್ಮದೇ ಆದ ನಿಲುವನ್ನು ಪ್ರತಿಪಾದಿಸುವ ಗುಣವಾಗಿತ್ತು. ಇದು ಮಹಾರಾಜರಿಗೂ ತಿಳಿದಿತ್ತು. ಆದರೆ ಕಲೆಗೆ ಪ್ರೋತ್ಸಾಹಿಸುವುದೇ ಮಹಾರಾಜರ ಗುಣವಾದ್ದರಿಂದ ಸಣ್ಣ ಪುಟ್ಟ ವಿಷಯಗಳು, ಅನ್ಯ ಮಾತುಗಳು ಗೌಣವಾಗಿದ್ದವು. ಹಾಗೆಯೇ ವೆಂಕಟಪ್ಪನವರು ಅವರು

ಜೀವಿಸಿರುವವರೆಗೂ ಮೈಸೂರು ಅರಮನೆ ಕಲಾವಿದರಾಗಿಯೇ ಅಭೂತಪೂರ್ವ ಕೆಲಸ ಮಾಡಿದರು. ಇವರು ಕಲಾ ರಚನೆ ಮಾಡುತ್ತಿದ್ದ ಸ್ಥಳವನ್ನೇ ಸ್ಮಾರಕ ಮಾಡಬಹುದು ಅದೊಂದು ಅಪೂರ್ವ ಸ್ಥಳ. ಅರಮನೆಯವರು ಮೋತಿಖಾನೆ ಕಟ್ಟಡದಲ್ಲಿ (ಜನತಾ ಬಜಾರ್) ಸ್ಟುಡಿಯೋಗೆ ಅನುಕೂಲ ಮಾಡಿಕೊಟ್ಟಿದ್ದರು. ಇಲ್ಲಿಯೇ ನವರತ್ನಗಳಂತಹ ಅಮೂಲ್ಯ ಚಿತ್ರಗಳನ್ನು ಪ್ಲಾಸ್ಟರ್ ಆಫ್ ಪ್ಯಾರೀಸ್‌ನ ಬಾಸ್ ರಿಲೀಫ್‌ಗಳನ್ನು, ದಂತಫಲಕದ ಮೇಲೆ ದಿವಾನ್ ರಾಮಸ್ವಾಮಿ ಮೊದಲಿಯಾರ್, ಕೋಚ್ ಬಿಹಾರದ ಮಹಾರಾಜರು, ಅಭಿನೀಂದ್ರ ಠಾಗೂರ್, ನಾಲ್ವಡಿ ಕೃಷ್ಣರಾಜ ಒಡೆಯರ್ ಮುಂತಾದವರ ಮಿನಿಯೇಚರ್ ಚಿತ್ರಗಳನ್ನು ಮಹಾಶಿವರಾತ್ರಿ 'ಮ್ಯಾಡ್ ಆಫ್ಟರ್ ವೀಣಾ' ಮುಂತಾದ ಜಗತ್‌ಪ್ರಸಿದ್ಧ ಚಿತ್ರಗಳನ್ನು ರಚನೆ ಮಾಡಿದ್ದು ಇಲ್ಲೇ.

ವೆಂಕಟಪ್ಪನವರು ಪೇಟಿಂಗ್ ಜೊತೆಗೆ ಸಂಗೀತ, ವೀಣಾರಚನೆ, ವೀಣಾವಾದನಗಳಲ್ಲೂ ಸಿದ್ಧಹಸ್ತರು. ಈ ವಿಷಯವನ್ನು ಪ್ರತ್ಯೇಕವಾಗಿಯೇ ಹೇಳಬೇಕಾಗುತ್ತದೆ. ಇಷ್ಟೊಂದು ಕಲಾನೈಪುಣ್ಯ ಅವರದು. ನನ್ನ ಅವರ ಗುರುಶಿಷ್ಯ ಸಂಬಂಧ ಅನ್ನುವುದಕ್ಕಿಂತ ನನ್ನ ತಂದೆ ಮತ್ತು ಅವರ ಸ್ನೇಹ ಒಡನಾಟ ಹಾಲು ಜೇನು ಬೆರೆತಂತೆ. ನನ್ನ ತಂದೆ ಕಲ್ಕತ್ತಾದಲ್ಲಿ ಮೆಡಿಕಲ್ ಓದುತ್ತಿದ್ದಾಗ ವೆಂಕಟಪ್ಪನವರು ಕಲ್ಕತ್ತಾದ ರಾಯಲ್ ಸ್ಕೂಲ್ ಅಫ್ ಆರ್ಟ್ಸ್‌ನಲ್ಲಿ ಕಲಾವಿದ್ಯಾರ್ಥಿ ಈರ್ವರೂ ಮೈಸೂರಿನ ಕನ್ನಡಿಗರಾಗಿದ್ದು ಸ್ನೇಹ ಬೆಳೆದು ಜೀವನಾಂತ್ಯದವರೆಗೂ ಹಾಗೆಯೇ ಇತ್ತು. ಇನ್ನು ಅನೇಕ ವಿಷಯಗಳು ಇದ್ದಾಗ್ಯೂ, ಸಮಯದ ಅಭಾವದಿಂದ ಕೆಲವೇ ವಿಷಯಗಳನ್ನು ತಮ್ಮೊಡನೆ ಹಂಚಿಕೊಂಡಿದ್ದೇನೆ. ಶ್ರೋತೃಗಳಿಗೆ ಹಿತವೆನಿಸಿದರೆ ನನ್ನ ಶ್ರಮ ಸಾರ್ಥಕವಾದೀತು.

## ಮೆಚ್ಚುಗೆ

ಮೈಸೂರು ಆಕಾಶವಾಣಿಯಲ್ಲಿ ಪ್ರಸಾರವಾದ ಈ ಭಾಷಣಕ್ಕೆ ಬಂದ ಮೆಚ್ಚುಗೆ ಪತ್ರಗಳು ಹಲವು. ಅದರಲ್ಲಿ ಶ್ರೀ ಜಯಚಾಮರಾಜ ಒಡೆಯರ್ ಅವರು ಅರಮನೆಯ ಮೂಲಕ ಕಳಿಸಿಕೊಟ್ಟ ಪತ್ರದಲ್ಲಿ ನಿಮ್ಮ ನಿರೂಪಣೆ ಶೈಲಿ ಮೆಚ್ಚುವಂತಹದ್ದು. ವೆಂಕಟಪ್ಪನವರ ಬಗೆಗಿದ್ದ ತಪ್ಪುಗ್ರಹಿಕೆಗಳಿಗೆ ಸೂಕ್ತ ಉತ್ತರವಿದೆ. ನಿಮ್ಮ ಮೊನಚಾದ ಮಾತುಗಳಲ್ಲಿ ದೃಢತೆ ಇದೆ. ಶುಭ ಆಶೀರ್ವಾದಗಳು.

ಸ್ವಾಮಿಗಳು ಸಹ 'ಭೇಷ್' ಇಂತಹ ಪ್ರತಿಪಾದನೆ ಅತ್ಯಾವಶ್ಯಕವಾಗಿತ್ತು. ಕಲೆಯ ಬಗ್ಗೆ ಏನೇನೂ ಅರಿವಿಲ್ಲದವರು ಸಹ ನಿಂದನೆ ಮಾಡುತ್ತಿರುತ್ತಾರೆ. ಇಂತಹ ಅನ್ಯಾಯದ ಮಾತುಗಳಾದಾಗ ನಿಮ್ಮ ಪ್ರತಿಭಟನೆಯ ನುಡಿಯಿರಲಿ, ಶುಭ ಹಾರೈಕೆಗಳು.

ಆಕಾಶವಾಣಿಗೆ ಬಂದ ಆಕ್ಷೇಪಣೆ ಎಂದರೆ ನೀವು ಮೈಸೂರಿಗೆ ಮಾತ್ರ ಸೀಮಿತವಾಗಿ ಪ್ರಸಾರ ಮಾಡಿರುವಿರಿ. ಕರ್ನಾಟಕದ ಎಲ್ಲಾ ಬಾನುಲಿಗಳಲ್ಲಿ ಪ್ರಸಾರವಾಗಬೇಕು ಎಂಬುದು ಸಾರ್ವತ್ರಿಕ ನುಡಿ.

ಇದನ್ನೇ ಮರುಪ್ರಸಾರ ಮಾಡುವುದರ ಬದಲಾಗಿ ವೆಂಕಟಪ್ಪನವರ ಬಗ್ಗೆ ಹೇಳದೆ ಇರುವ ಅನೇಕ ವಿಷಯಗಳಿವೆ. ಅವುಗಳನ್ನು ಕ್ರೋಢೀಕರಿಸಿ ಭಾಗ 2 ಮಾಡುವುದು ಸೂಕ್ತ. ಅದನ್ನು ರಾಜ್ಯಾದ್ಯಂತ ಪ್ರಸಾರ ಮಾಡೋಣ. ಅದನ್ನು ಬರೆದು ಸಿದ್ಧಪಡಿಸಿ ಎಂಬ ಆದೇಶ ಸುಭಾಷಿಣಿಯವರಿಗೆ ತಲುಪಿ ಕಾರ್ಯೋನ್ಮುಖವಾಗುವ ವೇಳೆಗೆ ಅಲ್ಲಿನ ಮುಖ್ಯಸ್ಥರ ವರ್ಗಾವಣೆ ಆಗಿ ಆ ಯೋಜನೆಯು ಸಹ ಅವರ

ಜೊತೆಯಲ್ಲಿಯೇ ವರ್ಗಾವಣೆ ಆದಂತಾಯಿತು ಎಂದು ಸಂದರ್ಶನ ಸಂದರ್ಭದಲ್ಲಿ ವಿಷಾದದ ನುಡಿ ಅವರದಾಗಿತ್ತು.

## ಕಲಾಸಂಗ್ರಹ

ಹಿಂದೆ ತಮ್ಮದೇ ಆದ ಏಕವ್ಯಕ್ತಿ ಕಲಾಪ್ರದರ್ಶನವನ್ನು ಮಾಡುತ್ತಿರಲಿಲ್ಲ, ಎಲ್ಲೆಲ್ಲಿ ಸಾಮೂಹಿಕ ಪ್ರದರ್ಶನ ಏರ್ಪಡಿಸಿ ಆಹ್ವಾನ ಬರುತ್ತಿತ್ತೋ ಅಲ್ಲಿಗೆ ಮಾತ್ರ ಚಿತ್ರಗಳನ್ನು ಕಳುಹಿಸುತ್ತಿದ್ದರು. ಚಿತ್ರರಚನೆಯನ್ನು ಸಹ ಅನಾವಶ್ಯಕವಾಗಿ ಮಾಡುತ್ತಿರಲಿಲ್ಲ, ಗ್ರಾಹಕನ ಬೇಡಿಕೆಯನ್ನು ಅನುಸರಿಸಿಯೇ ಚಿತ್ರ ರಚನೆ. ಒಂದು ವೇಳೆ ಚಿತ್ರ ರಚಿಸಿದ್ದೇ ಆದರೆ ಕಲಾವಿದ ತನ್ನ ನೆನಪಾಗಿ ಮಠ ಮಂದಿರಗಳಿಗೋ ಇಲ್ಲವೇ ಗಣ್ಯಾತಿಗಣ್ಯ ವ್ಯಕ್ತಿಗಳಿಗೋ ಕೊಡುವುದೋ ಆಗಿತ್ತು. ಅದರಂತೆಯೇ ಸುಭಾಷಿಣಿಯವರು ರಚಿಸಿಕೊಟ್ಟ ಚಿತ್ರಗಳು ಹಲವು ಮೈಸೂರಿನ ಶ್ರೀಮನ್ ಮಹಾರಾಜ ಜಯಚಾಮರಾಜ ಒಡೆಯರ್ ಅವರಿಗೆ 24 ಚಿತ್ರಗಳನ್ನು ರಚಿಸಿಕೊಟ್ಟನೆಂದು ಸಂದರ್ಶನದಲ್ಲಿ ತಿಳಿಸುತ್ತಾರೆ. (ಸಂಪ್ರದಾಯ ಕಲೆಯಾದುದರಿಂದ ಅವರ ಹೆಸರನ್ನು ಹಾಕದೇ ಕೊಟ್ಟ ಪರಿಣಾಮ ಏನೋ ಇಂದು ಅವುಗಳನ್ನು ಗುರುತಿಸಲಾಗುತ್ತಿಲ್ಲ)

ನಂಜನಗೂಡಿನಲ್ಲಿದ್ದಾಗ ರಚಿಸಿದ ಅಂಚೆ ಕಾಗದದ ಅಳತೆಯ ಚಿತ್ರಗಳಾದ ಆಚಾರ್ಯ ವಿನೋಭಾ ಭಾವೆ, ಇಂದಿರಾಗಾಂಧಿ, ರಾಜಾಜಿ, ದಕ್ಷಿಣಾಮೂರ್ತಿ, ರಾಜ ರಾಜೇಶ್ವರಿ ಚಿತ್ರಗಳನ್ನು ಡಾ. ಹಾ.ಮಾ. ನಾಯಕ್, ಪಿ.ಆರ್.ತಿಪ್ಪೇಸ್ವಾಮಿ ಅವರುಗಳಿಗೆ ತೋರಿಸಿದಾಗ ಇಂತಹ ಅಮೂಲ್ಯ ಕೃತಿಗಳನ್ನು ಮಾಡಿ ಮನೆಯಲ್ಲಿಯೇ ಇಟ್ಟುಕ್ಕೊಂಡರೆ ಏನು ಪ್ರಯೋಜನ? ಅದನ್ನು ನಮ್ಮ ಕನ್ನಡ ಅಧ್ಯಯನ ಸಂಸ್ಥೆಗೆ ಕೊಡಿ ಎಂದು ಪಡೆದಿದ್ದರಂತೆ. ಆದರೆ ಈಗ ಎಲ್ಲಿದೆ ಎಂಬುದು ನಿಗೂಢವಾಗಿದೆ.

ಪಿ.ಆರ್.ತಿಪ್ಪೇಸ್ವಾಮಿಯವರು ಆಸಕ್ತಿಯಿಂದ ಪಡೆದ ಹಂಸವಾಗೇಶ್ವರಿ ಕೃತಿ ಮಾತ್ರ ಜಾನಪದ ವಸ್ತು ಸಂಗ್ರಹಾಲಯದಲ್ಲಿದೆ ಎಂಬುದು ಸಮಾಧಾನ ತರುವ ಅಂಶ.

ಬಾಬು ರಾಜೇಂದ್ರ ಪ್ರಸಾದ್, ಸಿ. ರಾಜಗೋಪಾಲಾಚಾರಿ, ಇಂದಿರಾಗಾಂಧಿ, ಸಂಗೀತ ಶಾಸ್ತ್ರ ವಿಶಾರದ ಕೆ. ವಾಸುದೇವಾಚಾರ್, ಭೂದಾನ ಚಳುವಳಿಯ ನಾಯಕ ವಿನೋಬಾ ಭಾವೆ ಮುಂತಾದ ಗಣ್ಯಾತಿಗಣ್ಯರಿಗೆ ಅಂಚೆ ಕಾಗದದ ಆಳತೆಯ ಮುಖಚಿತ್ರಗಳನ್ನು ರಚಿಸಿಕೊಟ್ಟು ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಮೈಸೂರಿನ ಅಕ್ಕನ ಬಳಗದಲ್ಲಿ ಶರಣೆ ಅಕ್ಕ ಮಹಾದೇವಿ, ಸಾಯಿ ಮಂದಿರದಲ್ಲಿ ತೈಲವರ್ಣದ ಸಾಯಿಬಾಬಾ ಕುರಿತ ಸಂಯೋಜನ ಚಿತ್ರ, ಕರ್ನಾಟಕ ಕಾವೇರಿ ಎಂಪೋರಿಯಂ ದೆಹಲಿ ಶಾಖೆ ಮತ್ತು ಕರ್ನಾಟಕ ಶಾಖೆಗಳು, ಮೈಸೂರಿನ ಪ್ರಾಚ್ಯವಸ್ತು ಸಂಗ್ರಹಾಲಯ, ಬೆಂಗಳೂರಿನ ವಸ್ತು ಸಂಗ್ರಹಾಲಯ, ಕರ್ನಾಟಕ ಚಿತ್ರಕಲಾ ಪರಿಷತ್ತು ಮತ್ತು ಖಾಸಗಿ ಸಂಗ್ರಹವಾಗಿ ಕೆಲವು ಕಲಾಕೃತಿಗಳಿವೆಯೆಂದು ತಿಳಿದು ಬರುತ್ತದೆ.

ಕೊಟ್ಟು ಅಭ್ಯಾಸವೇ ವಿನಃ ಪಡೆದು ಅಭ್ಯಾಸವಿಲ್ಲದ ಸುಭಾಷಿಣಿಯವರು ವೆಂಕಟಪ್ಪನವರ

ಪತ್ರಗಳೆಲ್ಲವನ್ನು ಮುದ್ರಣ ಮಾಡಿ ನಿಮ್ಮ ಹೆಸರನ್ನು ಹಾಕುತ್ತೇವೆಂದು ತಿಳಿಸಿ ನೂರಾರು ಅಮೂಲ್ಯ ಪತ್ರಗಳನ್ನು ಪಡೆದ ಮಹನೀಯರೊಬ್ಬರು ಅದನ್ನು ಪ್ರಕಟಿಸುವುದಿರಲಿ ಅದು ಏನಾಯಿತು ಎಂದು ತಿಳಿಸದೇ ಸ್ವಂತದ್ದಾಗಿಸಿಕೊಂಡರು. ಇಲ್ಲವೇ ಅದನ್ನು ಕಳೆದು ಹಾಕಿರಬೇಕು ಎಂಬುದು ಸಂದರ್ಶನದಲ್ಲಿ ಬಂದ ವಿಷಾದದ ನುಡಿ. ಅದೇ ರೀತಿ ಅವರ ಕಲಾಕೃತಿಗಳನ್ನು ನೋಡುತ್ತೇವೆಂದು ನನ್ನ ಸ್ನೇಹಿತರಿಗೆ ತೋರಿಸುತ್ತೇವೆಂದು ಹೇಳುತ್ತಾ ಪಡೆದವರು ಹಿಂದಿರುಗಿಸದೇ ಹೋದದ್ದು ಹಲವು. (ಅನಾರೋಗ್ಯದಿಂದ ಹಾಸಿಗೆ ಹಿಡಿದಾಗ ಆದ ಘಟನೆಗಳಿವು) ಇದಲ್ಲದೇ ತಮ್ಮಲ್ಲಿದ್ದ ಕೆಲವು ಕಲಾಕೃತಿಗಳನ್ನು ಮತ್ತು ಶಿಲ್ಪಗಳನ್ನು ಮೈಸೂರಿನ ಪ್ರಾಚ್ಯವಸ್ತು ಸಂಗ್ರಹಾಲಯ ವೆಲ್ಲಿಂಗ್‌ಟನ್‌ಹೌಸ್ ಅಲ್ಲಿಗೆ ನೀಡಿರುತ್ತಾರೆ. (14.12.2001) ಅವು ಈಗ ಪ್ರದರ್ಶನಗೊಂಡಿವೆ.

### ಕಲಾ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ

ಇಪ್ಪತ್ತೈದು ಸಾವಿರ ರೂಪಾಯಿಗಳ ಇಡಗಂಟನ್ನು ಬ್ಯಾಂಕಿನಲ್ಲಿಟ್ಟು ಅದರ ಹಣವನ್ನು ಸಂಪ್ರದಾಯ ಕಲೆಯ ಅಭ್ಯಾಸಿಗಳಿಗೆ ಪ್ರೋತ್ಸಾಹದಾಯಕವಾಗಿ ನೀಡಬೇಕೆಂದು ಕರ್ನಾಟಕ ಚಿತ್ರಕಲಾ ಪರಿಷತ್ತಿಗೆ ನೀಡಿರುವುದು (13.09.1998) ಅವರಲ್ಲಿನ ಔದಾರ್ಯದ ಸಂಕೇತ. ಸತ್ತ ನಂತರದಲ್ಲಿ ಅವರ ವಶದಲ್ಲಿದ್ದುದನ್ನು ಯಾರ್‍ಯಾರಿಗೆ ಎಷ್ಟೆಷ್ಟು ಕೊಡಬೇಕೆಂಬುದನ್ನು ಸಹ ಉಯಿಲು (Will) ಬರೆದಿದ್ದರಂತೆ. ಶಿಲ್ಪಕಲೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಮೈಸೂರಿನ ಕಾವಾ B.F.A., ವಿದ್ಯಾರ್ಥಿಗೆ ಚಿನ್ನದ ಪದಕ ನೀಡಲು ದತ್ತಿ ಸ್ಥಾಪನೆ (2003) ಇದುವರೆಗೆ ನಾಲ್ಕು ವಿದ್ಯಾರ್ಥಿಗಳು ಚಿನ್ನದ ಪದಕ ಪಡೆದಿದ್ದಾರೆಂದು ತಿಳಿದು ಬರುತ್ತದೆ. ಇದಲ್ಲದೆ ಅವರು ನೆಲೆಸಿದ್ದ ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯ ಮತ್ತು ಮೈಸೂರಿನ ಚಾಮುಂಡಿ ಬೆಟ್ಟದ ದೇವಾಲಯಗಳಿಗೆ ವರ್ಷಕ್ಕೊಮ್ಮೆಯಾದರೂ ಪೂಜಾಕೈಂಕರ್ಯ ನಡೆಯಲು ಹಣ ತೊಡಗಿಸಿದ್ದಾರೆ. ಈ ಎಲ್ಲಾ ಅಂಶಗಳೂ ಸುಭಾಷಿಣಿದೇವಿಯವರಲ್ಲಿನ ಕಲೆ ಬಗೆಗಿನ ಅಪಾರ ಪ್ರೀತಿ, ದೈವಭಕ್ತಿಯನ್ನು ಬಿಂಬಿಸುತ್ತದೆ.

### ಜೀವನ ಸಂಜೆ

ಗುರುದ್ವಯರಾದ ವೆಂಕಟಪ್ಪನವರು ಮೈಸೂರು ತೊರೆದು ಹೋದ ನಂತರ ಸಿದ್ಧಲಿಂಗಸ್ವಾಮಿಗಳಲ್ಲಿ ಅಭ್ಯಾಸ ಮಾಡಿದ ನಂತರದಲ್ಲಿ ಅವರು ಸಹ ಕಾಲವಾದರು. ಲಾನ್ಸ್‌ಡೌನ್, ಬಿಲ್ಡಿಂಗ್‌ನಲ್ಲಿದ್ದ ಅವರ ಸ್ಥಳವನ್ನು ಸರ್ಕಾರ ಆಕ್ರಮಿಸಿಕೊಂಡಿತು. ತಂದೆಯವರು ತೀರಿಹೋದರು. ಇವೆಲ್ಲದರ ಹಿನ್ನೆಲೆಯಲ್ಲಿ ಮೈಸೂರು ತೊರೆದು ಸುಭಾಷಿಣಿಯವರು ತವರು ಮನೆಯಂತಿದ್ದ ನಂಜನಗೂಡು ಸೇರಿದರು. ಅವರ ಹೆಚ್ಚಿನ ಚಟುವಟಿಕೆಗಳು ಅಲ್ಲಿಗೆ ಸೀಮಿತವಾದವು. ಕ್ರಮೇಣ ಅವರಿಗೆ ಅನಾರೋಗ್ಯ ಕಾಡಲು ಆರಂಭಿಸಿದವು. ಉಪ್ಪು ಹುಳಿ, ಸಿಹಿಯನ್ನು ನಿಯಂತ್ರಣಗೊಳಿಸಿ ಜೀವನ ಸಾಗಿಸಬೇಕಾದ ಅನಿವಾರ್ಯತೆ ಉಂಟಾಯಿತು. ಮೈಸೂರಿನಲ್ಲಿ Low Income Group (LIG) ಆಧಾರದಲ್ಲಿ ಮನೆ ದೊರಕಿದ ನಂತರ ಮತ್ತೆ ಬಂದು ನೆಲೆಸಿದರು. ಆಸ್ಪತ್ರೆ ದರ್ಶನವೇ ನಿತ್ಯದ ಯಾತ್ರೆಯಾಗಿದ್ದ ಇವರನ್ನು ಕಲಾವಿದರು, ಕಲಾಭಿಮಾನಿಗಳು ಪೂರ್ಣ ಮರೆತೇ ಇದ್ದರು.

ಅಂಚೆ ಕಲಾ ಶಿಕ್ಷಣವನ್ನು ಪ್ರಪ್ರಥಮವಾಗಿ ಕರ್ನಾಟಕಕ್ಕೆ ಪರಿಚಯಿಸಿದ ಚಂದಮಾಮ ಖ್ಯಾತಿಯ ಎಂ.ಟಿ.ವಿ. ಆಚಾರ್ಯ ಹೆಸರಿನ ಪ್ರಶಸ್ತಿಯನ್ನು ನೀಡಲು ಆಚಾರ್ಯ ಚಿತ್ರಕಲಾ ಭವನವು ನಿರ್ಧರಿಸಿ

ಅವರ ಸಂದರ್ಶನ ಲೇಖನವನ್ನು ಈ ಲೇಖಕನೇ ಬರೆದು ವಿವಿಧ ಪತ್ರಿಕೆಗಳಲ್ಲಿ ಪ್ರಕಟಿಸಿ ಪ್ರಶಸ್ತಿ ನೀಡಿದ ಬಳಿಕವೇ (1999) ಅವರಿಗೆ ಕಲಾ ಜಗತ್ತಿನಲ್ಲಿ ಮರುಜನ್ಮ ಬಂದಂತಾಯಿತು. ತದನಂತರ 2000ನೇ ಇಸವಿಯಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಕೊಡಲು ಸರ್ಕಾರ ನಿರ್ಧರಿಸಿದಾಗ ಅವರು ತಿರುಗಾಡುವುದಿರಲಿ, ಮಾತನಾಡುವ ಶಕ್ತಿಯನ್ನೂ ಕಳೆದುಕೊಂಡಿದ್ದರು. ಅದರೂ ಅವರನ್ನು ನಾಲ್ಕಾರು ಜನರ ಸಹಾಯದಿಂದ ವೇದಿಕೆಗೆ ಕರೆತಂದು ಅಂದಿನ ಸಂಸ್ಕೃತಿ ಸಚಿವೆ ರಾಣಿ ಸತೀಶ್ ಅವರು ಪ್ರಶಸ್ತಿ ನೀಡಿದರು. ಕಣ್ಣಿನಲ್ಲಿ ಹರಿಯುತ್ತಿದ್ದ ನೀರೇ ಅವರ ಉತ್ತರವಾಗಿತ್ತು. ಅದು ಆನಂದ ಬಾಷ್ಪವೋ, ಇಲ್ಲವೇ ನನ್ನ ಕಲಾಸಾಧನೆಯನ್ನು ಗುರ್ತಿಸಲಿಕ್ಕೆ ಇಷ್ಟು ವರ್ಷ ಬೇಕಾಯಿತೇ, ಈ ಪ್ರಶಸ್ತಿಯನ್ನು ತೆಗೆದುಕೊಂಡು ನಾನೇನು ಮಾಡಲಿ, ಇಂದೋ ನಾಳೆಯೋ ಸಾಯುವವಳಿದ್ದೇನೆ. ಕೈಕಾಲು ಗಟ್ಟಿಯಾಗಿದ್ದಾಗಲೇ ಕೊಟ್ಟಿದರೆ ಮತ್ತಷ್ಟು ಕೆಲಸ ಮಾಡಲು ಸಹಕಾರಿಯಾಗುತ್ತಿತ್ತು ಎಂಬ ವ್ಯಥೆಯೋ ಎಂಬುದನ್ನು ಹತ್ತಿರದಿಂದ ಬಲ್ಲವರೇ ನೋಡಿ ಅರ್ಥ ಮಾಡಿಕೊಳ್ಳಬೇಕಾಗಿತ್ತು. ಆದಾದ ವರ್ಷಗಳ ನಂತರ ತಮ್ಮ ಇಹ ಯಾತ್ರೆಯನ್ನು ಪೂರೈಸಿದರು. (2002) ಆದರೆ ಸುದ್ದಿಯಾಗಲೆ ಇಲ್ಲ. ಕಲೆಗಾಗಿಯೇ ಸರ್ವಸ್ವವನ್ನೂ ಸಮರ್ಪಿಸಿಕೊಂಡು ವಿವಾಹ ರಹಿತವಾಗಿ ಬಾಳಿದ, ಅನ್ಯರ ಹಿತಕ್ಕಾಗಿ ಸಕಲವನ್ನು ತ್ಯಾಗ ಮಾಡಿದ ಕಲಾವಿದೆಯ ಅಂತ್ಯ ಅವರೇ ಊಹಿಸಿ ಬರೆದ ಚಿತ್ರವಾದ **ಆದರ್ಶ ಅಂತ್ಯ**ದಂತೆ ಅವರ ಆದರ್ಶ ಅದೃಶ್ಯವಾಯಿತು. ಬಯಲೊಳಗೆ ಬಯಲಾಯಿತು.

ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿಯನ್ನು ಸಹ ಪಡೆದಿದ್ದ (1985) ಈ ಕಲಾವಿದೆಗೆ ತಾವಿದ್ದ ನಂಜನಗೂಡು ಮನೆಯನ್ನು ಸ್ಮಾರಕವನ್ನಾಗಿ ಮಾಡಬೇಕು, ಮೈಸೂರಿನಲ್ಲಿದ್ದ ಸ್ಥಳದಲ್ಲಿ ಮಹಿಳೆಯರ ಸ್ವಉದ್ಯೋಗ ತರಬೇತಿ ಕೇಂದ್ರ ಮಾಡಬೇಕು. ಹತ್ತಾರು ಹೆಣ್ಮಕ್ಕಳು ಬದುಕಲು ಸ್ವತಂತ್ರ ಜೀವನ ನಡೆಸಲು ದಾರಿ ಮಾಡಿಕೊಡಬೇಕು. ನನ್ನ ಕಲಾಕೃತಿಗಳ ಕಿರು ಸಂಗ್ರಹಾಲಯ ಮಾಡಬೇಕು ಎಂಬೆಲ್ಲಾ ಆಕಾಂಕ್ಷೆ ಇಟ್ಟುಕೊಂಡಿದ್ದರು. ಆದರೇ ಯಾವುದೂ ಕೈಗೂಡಲಿಲ್ಲ, ಅವರ ಆರೋಗ್ಯವೇ ಅವರ ಕ್ರಿಯಾ ಯೋಚನೆಗಳಿಗೆ ಹಿನ್ನಡೆ ಕಲ್ಪಿಸುತ್ತಿತ್ತು. ಇಡೀ ಭಾರತವನ್ನು ಎರಡು ಮೂರು ಬಾರಿ ಸುತ್ತಾಡಿ ಜ್ಞಾನಾನುಭವವನ್ನು ವೃದ್ಧಿಸಿಕೊಂಡಿದ್ದರು. ತಮ್ಮ ಜೀವನ ಘಟ್ಟಗಳನ್ನು ಬರೆದಿಟ್ಟಿದ್ದರು. ಆದರೆ ಅವರಿಗೆ ಒಂದು ಪ್ರಬಲವಾದ ಬಯಕೆ ಇತ್ತು. ನನ್ನ ಗುರು ವೆಂಕಟಪ್ಪನವರ ಹೆಸರಿನ ಪ್ರಶಸ್ತಿ ಪಡೆಯಬೇಕೆಂಬುದು. ಆದರೇ ದುರ್ದೈವ, ಆಯ್ಕೆ ಸಮಿತಿ ಸೂಕ್ತ ರೀತಿಯ ತಪಾಸಣೆ ಮಾಡದೇ ಪ್ರಚಾರದಲ್ಲಿದ್ದವರಿಗೆ ಮಾತ್ರ ಪ್ರದಾನ ಮಾಡಲು ಶಿಫಾರಸ್ಸು ಮಾಡಿತೆಂಬುದನ್ನು ಅವರು ಈ ಲೇಖಕನೊಡನೆ ಹಲವು ಬಾರಿ ಹೇಳಿಕೊಂಡಿದ್ದುಂಟು.

ಕನ್ನಡ, ಇಂಗ್ಲೀಷ್, ಹಿಂದಿ, ತಮಿಳು, ತೆಲುಗು ಭಾಷಾ ಪರಿಚಯ ಹೊಂದಿದ್ದ ಇವರಿಗೆ ಗೌರವ ಮಾಸಾಶನ ನೂರು ರೂ. ದೊರಕುತ್ತಿತ್ತು. ಆಲ್ ಇಂಡಿಯಾ ಫೈನ್ ಆರ್ಟ್ಸ್ ಮತ್ತು ಕ್ರಾಫ್ಟ್ ಸೊಸೈಟಿ (ನವದೆಹಲಿ)ಯವರು ವೆಟರನ್ ಆರ್ಟಿಸ್ಟ್ ಆಫ್ ಇಂಡಿಯಾ ಎಂದು ಗುರುತಿಸಿ 1995-96 ರಿಂದ ಪ್ರತಿವರ್ಷ ಮೂರು ಸಾವಿರ ರೂ.ಗಳ ಗೌರವಧನ ಕಳುಹಿಸುತ್ತಿದ್ದರು.

### ಸಮಾರೋಪ

ಸುಭಾಷಿಣಿಯವರು ತಮ್ಮ ಜೀವನ ರೂಪಿಸುವಲ್ಲಿ ಎದುರಾದ ಸಮಸ್ಯೆಗಳು ಹಲವು. ಬಾಲ್ಯದಲ್ಲಿ

ಎಲ್ಲರಂತೆ ಶಾಲಾ ಕಾಲೇಜುಗಳಿಗೆ ಹೋಗಿ ಕಲಿಯಲಾಗಲಿಲ್ಲ. ತಂದೆ ತಾಯಂದಿರಿಗೆ ಹೆಣ್ಣುಮಕ್ಕಳನ್ನು ಗಂಡು ಹುಡುಗರ ಶಾಲೆಗೆ ಕಳುಹಿಸುವುದೆಂದರೆ ಒಂದು ರೀತಿಯ ಮುಜುಗರ. ಇದು ರಾಜ ಪರಿವಾರದಲ್ಲಿಯೂ ಸಹ ಇಂತಹ ವಾತಾವರಣವಿದ್ದುದರಿಂದ ಸಾಮಾನ್ಯವಾಗಿ ಹೆಣ್ಣುಮಕ್ಕಳಿಗೆ ತಮ್ಮ-ತಮ್ಮ ಮನೆಗೆ ಶಿಕ್ಷಕರನ್ನು ಕರೆಸಿ ಪಾಠ ಹೇಳಿಸುವ ರೂಢಿಯಿತ್ತು. ಶ್ರೀಮಂತ ಜನರು ಮಾತ್ರ ಈ ರೀತಿ ಶಿಕ್ಷಣ ಪಡೆಯಲು ಸಾಧ್ಯವಾಗುತ್ತಿದ್ದ ಕಾಲವದು. ಅದರಂತೆಯೇ ಸುಭಾಷಿಣಿಯವರಿಗೂ ಸಹ ಮನೆಯಲ್ಲಿಯೇ ಎಲ್ಲಾ ಶಿಕ್ಷಣ ನೀಡಲಾಯಿತು. ಎಲ್ಲಿ ಹೋದರಲ್ಲಿಗೆ ಅವರ ಹಿರಿಯರ ಇಲ್ಲವೇ ತಾಯಿಯವರ ಬೆಂಗಾವಲಿರುತ್ತಿತ್ತು.

ವೆಂಕಟಪ್ಪನವರ ಸ್ನೇಹ ಮತ್ತವರ ಖ್ಯಾತಿಯನ್ನು ಗಮನಿಸುತ್ತಿದ್ದ ಸುಭಾಷಿಣಿಯವರ ಮಾತಾಪಿತೃಗಳು ತಮ್ಮ ಮಗಳು ಹಾಗೆಯೇ ಆಗಬೇಕೆಂಬ ಹಂಬಲವುಳ್ಳವರಾಗಿದ್ದು, ಕಲಿಯಲು ಬೇಕಾದ ಎಲ್ಲಾ ಸೌಕರ್ಯಗಳನ್ನು ಒದಗಿಸಿದ್ದರು. ವಿವಾಹವೆಂಬ ಬಂಧನವೇ ಬೇಡವೆಂಬ ತೀರ್ಮಾನಕ್ಕೆ ಬಂದಿದ್ದರು.

ವೆಂಕಟಪ್ಪನವರ ಬಂಗಾಲಿ ಶೈಲಿ, ಸ್ವಾಮಿಗಳವರ ಶಾಸ್ತ್ರಾಧಾರಿತ ರಚನಾ ಶೈಲಿ ಇವೆರಡಕ್ಕಿಂತ ಮಿಗಿಲಾಗಿ ರವಿವರ್ಮನ ಕ್ಯಾಲೆಂಡರ್ ಚಿತ್ರ ರಚನಾ ವಿಧಾನ ಈ ಮೂರನ್ನು ಮೈಗೂಡಿಸಿಕೊಂಡು ತಮ್ಮದೇ ಆದ ಶೈಲಿಯನ್ನು ಬೆಳೆಸಿಕೊಂಡಿದ್ದರು. ಜೊತೆಗೆ ಹೊಲಿಗೆ, ಕಸೂತಿ, ಗೊಂಬೆ ತಯಾರಿಕೆ, ಪೇಪರ್ ಪಲ್ಪ ಮುಂತಾದ ಕುಶಲಕಲೆ ತಯಾರಿಕೆಯಲ್ಲಿ ಪರಿಶ್ರಮ ಹೊಂದಿದ್ದರು. ಇವರು ಸ್ವತಂತ್ರವಾಗಿ ಕಲಾ ಪ್ರದರ್ಶನ ಮಾಡುವ ಮಟ್ಟಕ್ಕೆ ಬೆಳೆದಿದ್ದರು. ಎಲ್ಲಾ ಸೌಲಭ್ಯಗಳೂ ನಿರಾತಂಕವಾಗಿ ದೊರಕುತ್ತಿದ್ದವು. ಸಹಾಯ ಮಾಡುವ ಜನಕ್ಕೇನೂ ಕೊರತೆ ಇರಲಿಲ್ಲ. ಆದರೆ ಪ್ರಚಾರದ ಬೆನ್ನೇರಿದರೆ ಕಲಾ ಸರಸ್ವತಿ ನಿನ್ನಿಂದ ದೂರವಾಗುತ್ತಾಳೆ ಎಂಬ ಎಚ್ಚರಿಕೆಯ ಗಂಟೆಯನ್ನು ವೆಂಕಟಪ್ಪನವರು ಭೇಟಿಯಾದಾಗಲೆಲ್ಲಾ ಹೇಳುತ್ತಿದ್ದುದರಿಂದ ಮನಸ್ಸಿನ ಮೇಲೆ ತೀವ್ರ ಪರಿಣಾಮ ಉಂಟಾಗಿ ತಮ್ಮಲ್ಲಿದ್ದ ಕಲಾ ಸಾಮರ್ಥ್ಯವನ್ನು ಸೂಕ್ತ ರೀತಿಯಲ್ಲಿ ಹೊರಗೆಡವಲಾರದೇ ಸೌಗಂಧಯುಕ್ತವಾದ ಪುಷ್ಪವೊಂದು ಕಾಡಿನಲ್ಲಿಯೇ ಅರಳಿ ಅಲ್ಲಿಯೇ ಅಂತ್ಯ ಕಂಡಂತಾಯಿತೆಂದರೆ ತಪ್ಪಾಗಲಿಕ್ಕಿಲ್ಲ.

ಈ ಹಿತನುಡಿಗಳು ಇಂದಿನ ಸಾಮಾಜಿಕ ವ್ಯವಸ್ಥೆಗಳಲ್ಲಿ ಎಷ್ಟು ಸಮಂಜಸವೆಂಬುದು ಚಿಂತನಾರ್ಹವಾದ ವಿಷಯ. ಈ ಮಾತಿನ ಪಾಲನೆಯಿಂದಾಗಿ ಅವರಲ್ಲಿನ ಕಲೆ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಸಿಗಬೇಕಾದ ರಾಷ್ಟ್ರಮಟ್ಟದ ಪ್ರಶಸ್ತಿ ಗೌರವಗಳು ದೊರಕಂತಾದವು. ಜೀವನಾಂತ್ಯ ಕಾಲದಲ್ಲಿ ಅನೇಕ ರೋಗಗಳು ಅವರನ್ನು ಕಾಡಿಸಲಿಕ್ಕೆ ಪ್ರಾರಂಭಿಸಿ ಅವರಲ್ಲಿದ್ದ ಸ್ಫೂರ್ತಿ, ಚಟುವಟಿಕೆಗಳಿಗೆ ಪೂರ್ಣ ವಿರಾಮ ನೀಡಿದವು. ಹತ್ತಾರು ವರ್ಷಗಳ ಕಾಲ ನರಳಿದರು. ಒಂಟಿಯಾದ ಜೀವಕ್ಕೆ ಬಣ್ಣ, ಬ್ರಷ್, ಉಳಿ, ಸುತ್ತಿಗೆಗಳೇ ಒಡನಾಡಿಗಳಾಗಿದ್ದುದರಿಂದ ಸರ್ಕಾರದ ಗಮನಕ್ಕೆ ತರುವ ಜನರು ಇಲ್ಲದೇ, ಸಿಗಬೇಕಾದ ವೈದ್ಯಕೀಯ ಧನಸಹಾಯವು ದೊರೆಯದೇ, ಕಾಂಗ್ರೆಸ್ ಬೆಳವಣಿಗೆಗಾಗಿ ದುಡಿದ ಹಿರಿಯ ಜೀವವನ್ನು ಒಮ್ಮೆಯೂ ಗಮನಿಸಿದ ಕಾಂಗ್ರೆಸ್ ಮಂದಿ ತನ್ನ ಜಡತ್ವವನ್ನು ಸಾಬೀತು ಮಾಡಿತೆಂಬುದು ದಾಖಲಿಸುವ ಅಂಶವಾಗಿದೆ.

ರಾಜ್ಯ ಸರ್ಕಾರ ವರ್ಣಶಿಲ್ಪಿ ವೆಂಕಟಪ್ಪನವರ ಹೆಸರಿನಲ್ಲಿ ಕೊಡುತ್ತಿರುವ ಪ್ರಶಸ್ತಿಯನ್ನು ಪಡೆದವರಲ್ಲಿ ಆ ಕಲಾವಿದರನ್ನು ನೋಡಿದವರು ಕಂಡು ಮಾತನಾಡಿಸಿದವರು ಬೆರಳೆಣಿಕೆಯಷ್ಟು ಮಂದಿ. ಅವರ

ಬಗ್ಗೆ ಪುಸ್ತಕ ಓದಿ ತಿಳಿದುಕೊಂಡವರು ಕೆಲವು ಮಂದಿ. ಬಹುತೇಕ ಪ್ರಶಸ್ತಿ ವಿಜೇತರಿಗೆ ಅಥವಾ ಮುಂದೆ ಪ್ರಶಸ್ತಿ ಪಡೆಯಲಿಚ್ಛಿಸುವವರಿಗೆಲ್ಲಾ ವೆಂಕಟಪ್ಪನವರ ಬಗ್ಗೆ ತಿಳಿದುಕೊಳ್ಳುವ ಇರಾದೆಯು ಇರುವುದಿಲ್ಲ, ಅದರ ಅವಶ್ಯಕತೆಯು ಇಲ್ಲ ಎಂದು ವಾದಿಸುವವರು ಮುಂದಿನ ತಲೆಮಾರಿನಲ್ಲಿ ಕಾಣಬಹುದು.

ಆದರೆ ವೆಂಕಟಪ್ಪನವರನ್ನು ಗುರುವನ್ನಾಗಿ ಸ್ವೀಕರಿಸಿ (ಗುರುವೆಂದು ಒಪ್ಪಿಕೊಳ್ಳದಿದ್ದರೂ) ಅವರ ಬಳಿಯಲ್ಲಿ ನೇರವಾಗಿ ಕಲಿಯಲು ಅವಕಾಶವಿಲ್ಲದಿದ್ದರೂ ತಮ್ಮ ತಂದೆ ತಾಯಿಯವರ ಜೊತೆಯಲ್ಲಿ ಹೋಗಿ ಬರೆದುದನ್ನು ಅವರಿಗೆ ತೋರಿಸಿ ಅವರು ಹೇಳಿದ ತಪ್ಪು ಒಪ್ಪುಗಳನ್ನು ಮನನಿಸಿಕೊಂಡು ಬರೆಯುವ ಯತ್ನ ಮಾಡಿದವರು. ಏಕೆಂದರೆ ಯಾವ ಹೆಂಗಸರನ್ನೂ ಅದರಲ್ಲೂ ಕನ್ಯೆಯರನ್ನು ತಮ್ಮ ಕಲಾನಿವಾಸದ ಬಳಿ ಬರಲು ಅವಕಾಶ ಕೊಡುತ್ತಿರಲಿಲ್ಲ, ಮಾತಾಡುವುದಂತು ಬಹುದೂರ. ಎರಡನೆಯದಾಗಿ ವೆಂಕಟಪ್ಪನವರು ಉನ್ನತ ಕಲಾಸಾಧನೆ ಮಾಡಿದ್ದರೂ ನಾನಿನ್ನೂ ವಿದ್ಯಾರ್ಥಿಯೆಂದೇ ಭಾವಿಸಿದ್ದುದರಿಂದ ಇನ್ನೊಬ್ಬರಿಗೆ ಪಾಠ ಹೇಳುವ, ಕಲಿಸುವ ವಿಚಾರವೇ ಅವರ ಮನಸ್ಸಿನಲ್ಲಿರಲಿಲ್ಲ, ವೆಂಕಟಪ್ಪನವರು ರೂಢಿಸಿಕೊಂಡು ಬಂದಿದ್ದ ರಕ್ತಗತವಾದ ನಡವಳಿಕೆ. ಇದನ್ನು ವೈರಾಗ್ಯ ಅಥವಾ ಅಪರಿಗ್ರಹ ವ್ರತ ಎಂದು ತರ್ಕಿಸಿದರೂ ಸಾಮಾಜಿಕವಾಗಿ ಅವರ ಮನೋಭಾವನೆಯನ್ನು ಎಲ್ಲರೂ ಬೆಳೆಸಿಕೊಂಡಿದ್ದೇ ಆದರೆ ಇನ್ನೊಬ್ಬರಿಗೆ ತಿಳಿ ಹೇಳುವ ಇಲ್ಲವೇ ಪಾಠ ಮಾಡುವ ಪ್ರಶ್ನೆಯೇ ಬರದೇ ಅವರಲ್ಲಿದ್ದ ಕಲೆ, ಸಾಹಿತ್ಯ ಮತ್ತಿತರ ವಿದ್ಯೆಗಳು ಅವರವರಲ್ಲಿಯೇ ಹೃದ್ಗತವಾಗಿ ಅವರೊಡನೆಯೇ ನಾಶವಾಗಬೇಕಾಗುತ್ತದೆ. ಜಗತ್ತಿನಲ್ಲಿ ಎಲ್ಲವನ್ನೂ ತಿಳಿದವರು ಯಾರೂ ಇಲ್ಲ, ಜಗತ್ತಿನಲ್ಲಿರುವುದೆಲ್ಲವನ್ನು ತಿಳಿಯಲು ಯಾರಿಂದಲೂ ಸಾಧ್ಯವಿಲ್ಲ ಎಂಬುದು ಕಠೋರ ಸತ್ಯ. ಸುಭಾಷಿಣಿ ದೇವಿ ಅವರಿಗೆ ಹೆಣ್ಣೆಂದು ಸಿದ್ಧಲಿಂಗಸ್ವಾಮಿಗಳು ತಿರಸ್ಕರಿಸದೇ ಹತ್ತಾರು ಶಿಷ್ಯರ ಜೊತೆಯಲ್ಲಿ ತಮ್ಮ ಗುರುಕುಲದಲ್ಲಿ ಚಿತ್ರಕಲೆ ಮತ್ತು ಶಿಲ್ಪ ಕೆತ್ತನೆ ಹೇಳಿಕೊಟ್ಟಿದ್ದು ಅವರ ಮೇರು ಗುಣ ಅನ್ನಬಹುದು. ಪುರುಷನಷ್ಟೇ ಸ್ತ್ರೀಗೂ ಸಮಾನ ಅವಕಾಶವಿರಬೇಕೆಂಬ ಪ್ರಗತಿಪರ ವಿಚಾರವನ್ನು ಅನುಷ್ಠಾನಕ್ಕೆ ತರುವ ಮೂಲಕ ಒಳ್ಳೆಯ ಕಲಾವಿದೆಯಾಗಿ ರೂಪಿಸುವುದರಲ್ಲಿ ಅವರ ಶ್ರಮ ಸಾರ್ಥಕವಾದದ್ದೆನ್ನಬಹುದು.

ಒಟ್ಟಾರೆ ಸುಭಾಷಿಣಿಯವರ ಜೀವನ ಮತ್ತು ಮನೋಧರ್ಮವನ್ನು ಅವಲೋಕಿಸಿದಾಗ ನನಗೆ ಕವಿ ಕುಮಾರವ್ಯಾಸನ ವಾಣಿಯೊಂದು ನೆನಪಿಗೆ ಬರುತ್ತದೆ. 'ಹಲಗೆ ಬಳಪವ ಪಿಡಿಯದೊಂದಗ್ಗಳಿಕೆ' ಎಂದು ಅಗ್ಗಳಿಕೆಯನ್ನು ತಾನೇ ಹೇಳಿಕೊಳ್ಳುತ್ತಾ ಕವಿತಾಶಕ್ತಿಯ ಮೂಲ ಪಾಂಡಿತ್ಯ ಪ್ರತಿಭೆಗಳಾಗಿರದೇ ಭಗವದ್ ಅನುಗ್ರಹವು ಮುಖ್ಯವೆಂದು ಕವಿ ಹೇಳುತ್ತಾನೆ. ಹಾಗೆಯೇ ಕಲಾವಿದೆ ಸುಭಾಷಿಣಿದೇವಿ 'ಡಿಗ್ರಿ ಸರ್ಟಿಫಿಕೇಟ್‌ಗಳನ್ನು ಪಡೆಯದಿರುವುದೊಗ್ಗಳಿಕೆ'ಯಾಗಿ ಭಗವಂತನ ಅನುಗ್ರಹವೇ ಮುಖ್ಯವೆಂದು ಭಾವಿಸಿ ಕಲೆ ನನಗೆ ದೈವದತ್ತವಾಗಿ ಕೊಟ್ಟ ವರವೆಂದು ನಂಬಿದ್ದರು. ಅದೇ ಅವರ ಜೀವನ ಶೈಲಿ ಆಗಿತ್ತು.

## ಸಮಾಜ ಸೇವೆ ಮತ್ತಿತರ ಚಟುವಟಿಕೆಗಳು

- ★ ಜನನ 20-05-1920
- ★ ನಂಜನಗೂಡು ಮಹಿಳಾ ವಿದ್ಯಾಪೀಠದ ಕಾರ್ಯಕಾರಿ ಸಮಿತಿ ಮತ್ತು ಪೋಷಕರಾಗಿ 1973ರಿಂದ ಜೀವನಾಂತ್ಯದವರೆಗೆ ಸೇವೆ ಸಲ್ಲಿಕೆ.
- ★ ನಂಜನಗೂಡು ರೈಲ್ವೆ ಕನ್ಸಲೇಟಿವ್ ಸಮಿತಿ ಸದಸ್ಯೆ 1974-1988.
- ★ ನಂಜನಗೂಡಿನ ಸ್ಕೂಲ್‌ಗಳ ಪುರೋಭಿವೃದ್ಧಿ, ಆಸ್ಪತ್ರೆಗಳ ಸಲಹಾ ಸಮಿತಿ ಮತ್ತು ಪೋಲಿಸ್ ಸಲಹಾ ಸಮಿತಿಗಳಲ್ಲಿ ಸದಸ್ಯರಾಗಿ. 1974-1984.
- ★ ಮೈಸೂರು ಜೆ.ಎಸ್.ಎಸ್. ಮಹಿಳಾ ಕಾಲೇಜು ವಿದ್ಯಾರ್ಥಿ ವೇತನ ಸಮಿತಿ ಸದಸ್ಯೆ.
- ★ ಮೈಸೂರು ಜಿಲ್ಲಾ ಕಾಂಗ್ರೆಸ್ ಮಹಿಳಾ ಸಂಚಾಲಕಿ.
- ★ ಮೈಸೂರು ಸಾರ್ವಜನಿಕ ಮಹಿಳಾ ಕಾಲೇಜು ಸ್ಕಾಲರ್‌ಷಿಪ್ ಕಮಿಟಿ ಸದಸ್ಯೆ.
- ★ ಮೈಸೂರು ದಸರಾ ವಸ್ತುಪ್ರದರ್ಶನ ಕಲಾ ವಿಭಾಗ ಸಮಿತಿ 1947-1970ರ ವರೆಗೆ.
- ★ ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್‌ನ ಅಜೀವ ಸದಸ್ಯೆ. ಹಲವಾರು ವರ್ಷ ಕಾರ್ಯಕಾರಿ ಸಮಿತಿ ಸದಸ್ಯೆ.
- ★ ದೆಹಲಿಯ ಆಲ್ ಇಂಡಿಯಾ ಫೈನ್ ಆರ್ಟ್ಸ್ ಮತ್ತು ಕ್ರಾಫ್ಟ್ ಸೊಸೈಟಿಯ ಸದಸ್ಯೆ.
- ★ 1963ರಲ್ಲಿ ಕೇಂದ್ರ ಲಲಿತಕಲಾ ಅಕಾಡೆಮಿಯಿಂದ ಪ್ರಕಟವಾದ ಕಲಾವಿದರ ಡೈರಿಯಲ್ಲಿ ಪರಿಚಯ ಪ್ರಕಟ.
- ★ ಬೆಂಗಳೂರಿನಲ್ಲಿರುವ ಅಖಿಲ ಭಾರತ ಕರಕುಶಲ ಅಭಿವೃದ್ಧಿ ಮಂಡಲಿ ಮತ್ತು ಪ್ರಾದೇಶಿಕ ತರಬೇತಿಕೇಂದ್ರ ಇವರ ಆಹ್ವಾನದ ಮೇರೆಗೆ Moulding, Casting, Paper Cutting, Dolls ಇವುಗಳಲ್ಲಿ ಶಿಕ್ಷಣ ಹಾಗೂ ಕೃತಿಗಳ ನಿರ್ಮಾಣ.
- ★ 1957 ದೆಹಲಿಯ ಕರಕುಶಲ ಕೇಂದ್ರ ಮಂಡಲಿ Master Craft Women at Work ಎಂಬ ಕರಕುಶಲ ಕಲಾ ಪ್ರದರ್ಶನದಲ್ಲಿ ಭಾರತ ಸರ್ಕಾರದ ಆಹ್ವಾನದ ಮೇರೆಗೆ ಕರ್ನಾಟಕ ಪ್ರತಿನಿಧಿಯಾಗಿ ಭಾಗವಹಿಸುವಿಕೆ.
- ★ 01-01-1984ರಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಗೌರವ ಮಾಸಾಶನ.
- ★ 1995-96ರಿಂದ ಆಲ್ ಇಂಡಿಯಾ ಫೈನ್ ಆರ್ಟ್ಸ್ ಮತ್ತು ಕ್ರಾಫ್ಟ್ ಸೊಸೈಟಿ, ನವದೆಹಲಿ


ಇವರಿಂದ ವೆಟರನ್ ಆರ್ಟಿಸ್ಟ್ ಆಫ್ ಇಂಡಿಯಾ ಎಂದು ಗುರುತಿಸಿ ವಾರ್ಷಿಕ (3000/-) ಮೂರು ಸಾವಿರ ರೂ. ನೀಡಿಕೆ.

★ 1985ರಲ್ಲಿ ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿ.

★ 1999ರಲ್ಲಿ ಎಂ.ಟಿ.ವಿ. ಆಚಾರ್ಯ ಪ್ರಶಸ್ತಿ.

★ 2000ದಲ್ಲಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ.

★ 21-09-2002ರಲ್ಲಿ ಇಹಲೋಕದಿಂದ ನಿರ್ಗಮನ.









कैसे?













































Subhashini

# SHUBHASHINI DEVI

Before Indian Independence, in the first half of the last 20th Century, very few women artists could be seen in public gaze. A few women artists confined themselves to their homes and their art was meant only for interior decoration of their homes. In a situation like this, an exceptional woman, hailing from a merchants family, devoted her entire life for the cause of art and social work. This remarkable woman is Subhashini Devi, who ventured into sculpture as well as painting. An extraordinary aspect of Subhashini is that she had little schooling and practically her training in painting and sculpture was minimal. On her own she learnt the nuances of art by self study. Here, it is to be mentioned that she got some guidance indirectly from the famous Chitra Shilpi Venkatappa, in whose name Venkatappa Art Gallery in Bangalore is built. Subhashini's achivements in the field of art stand on a high pedestal. In recognition of her artistic attainments, she was bestowed with many honours.

Subhashini was born on 20-05-1920 at Landsdowne Building in Mysore, the then capital of the erst while Mysore State. This building now housing several shops, was the ancestral property of her forefathers who were revenue officials in the service of the Mysore Palace. Her parents were, Rathnamma the mother and J.Venkataswamy Chetty the father. Her father was a trader who was running departmental stores under the name "JAGANNATA

STORES". He had a checkered career. He had been to Japan to Study Industrial Enterprenership for women. So also he studied medicine in Calcutta. It is during his sojourn in Calcutta he met Venkatappa who was studying art in Shantiniketan. They became fast friends and this friendship lasted long, till the demise of Venkataswamy Chettiar. This friendship with the great artist had an impact on Chettiar, who wanted his daughter to emulate Venkatappa. He prevailed upon Subhashini to study ART. She readily agreed and started practising drawing and painting. She wanted to learn directly from Venkatappa. However, it was impossible since he never taught any students. Nevertheless Venkatappa obliged chettiar when he brought his daughters art works for evaluation.

Venkatappa, not only used to correct the drawings and paintings but also offered suggestions for improvement. This was a kind of distant education in art which laid good foundation for Subhashini's self study in future. She was quite conscious that self study meant lot of study and practice.

To gain knowledge, she visited art exhibitions, Museams and libraries. On her own, she reviewed the features of the prize winning pictures, observing their plus and minus points; she derived full support from her father for all her activities.

**Joins Swamiji's Ashram for formal training in Sculpture**

Subhashini was getting guidance form Venkatappa. Due to some differences with the palace establishment Venkatappa left Mysore. Though Subhashini had attained

some proficiency, to HONE her skills. She joined the Ashram of Shilpi Siddanti Siddalinga Swamy who was running a Gurukul type of School. Siddalinga Swamy was a great scholar proficient in the traditional texts on Sculpture. He was also quite modern in his approach. He was a generous man, who wanted to impart every bit of his learning to his disciples so as to make them perfectionists. When Subhashini approached him, he welcomed her. In those days sculpting was dominated by men and even in Swamiji's Gurukula there were only men. Yet it was the progressive thinking of Swamiji that made him to admit a woman as a disciple Subhashini was fortunate to get admission. She could handle the chisel like other men. At home, she did drawing and painting. At the Gurukul she did sculpting. Here in Gurukula she got an opportunity to go through the ancient texts on sculpture and she could follow in practice all the prescriptions to sculpt the images of gods. She also became adept in sculpting portraits and other secular images. The training at Gurukul blossomed her talents as a sculptor.

## Exhibitions and Awards

An important period of Indian history when India got Independence from alien rule, the year 1947 was an year of celebration and Jubilation.

The annual Dasara Exhibition known for its popularity also geared up for the occasion. The value and number of prizes were increased. For the first time Subhashini sent a miniature painting titled "RAMA AND SHABARI" to the Dasara Exhibition which won a first prize. It was remarkable that she won a first prize in the first attempt itself. This demonstrated that she had sufficient prowess in painting.

Thereafter, it became a regular feature in her life to participate and win prizes. A self made artist proved that she could compete with those having FORMAL art education.

In 1950, she secured a silver medal at the Dasara Exhibition for the ICON, Bala Ganapathi. Though she was selected as a delegate in the cultural team visiting Russia, she missed the opportunity, due to her father's sickness. Subhashini was the only sculptor from Karnataka who participated in the Handicrafts Exhibition organised by Central Handicrafts Development Centre, as an adjunct to the celebration of the International year for the women. The entire press of Delhi carried front page articles and photographs of Subhashini at work. In fact one paper had commented "WHAT A GREAT GIFT GOD HAS GRANTED SUBHASHINI". The then Prime Minister of India smt.Indira Gandhi posed for a photograph with Subhashini.

## SUPERB DRAUGHTMANSHIP

In this age of Computers, wonders can be made in graphic design. Manipulating in a precise manner, enlargement and reduction, colour variation, change in perspective and backgrounds etc., are child's play. However in the first part of the last century paintings had to be done for exact sizes. If the pictures needed details, precision, draughtsmanship was a pre-requisite. Venkatappa painted post card size portraits of National leaders Mahatma Gandhi, Pandit Jawaharlal Nehru and others. One could see fine, elaborate and precision work in these one's. It may be out of style, but he took paints to draw even eye lashes and eye brows.

In those days when colour photography was rare, Venkatappa's Portraits are the realistic masterpieces for record purposes. After Venkatappa, it was only Subhashini Devi who followed him, scrupulously adhering to his methods. She had both the acumen and the necessary drawing proficiency.

Subhashini, produced several post card size pictures with minute details and excellent rendering of colours. Her portrayal of Mahatma Gandhi, Pandit Jawaharlal Nehru, Subash Chandra Bose, Indira Gandhi, Sarojini Naidu Ravindranath Tagore, Sri Jayachamarajendra Wodeyar, her master Siddalinga Swamy, K.Venkatappa, her parents and grand parents are all classics worthy of preservation for posterity, Besides, she has done P.C. size compositions of Deities and mythological themes such as Mahishasura Mardhini, Shiva Parvathi, Gajendra Moksha, Andhakasura Samhara, Nataraja etc. her patient and superb skill can be viewed by using magnifying glass or by scanning and enlarging.

It is interesting to observe that many other contemporary eminent artists like, M.T.V.Acharya, M.E.Guru, M.J.Suddhodhan, Kalappa, P.R.Thippeswamy, F.M.Sufi and others did not attempt this kind of fine painting.

Subhashini had adopted two main themes for her subjects of painting. 1) Religious, Mythological paintings 2) Secular ones, sometimes having social message. By analysing her works, her personality can also be evaluated. Subhashini never bothered to have solo shows though there were promoters available in plenty and she had enough number of works to display. She shied publicity and used to say "once you are after publicity, your creativity sufferes"

Subhashini emulated Venkatappa who was insular and never interested in public shows. Strangely Subhashini did not marry and remained a spinster like her role model Venkatappa who was a bachelor.

Some of her important works are critically examined in the following paragraphs.

**Ideal End**

There is an axiom "Birth is uncertain while death is certain". Preparation for the end has psychological ramifications. Some are mentally prepared for the inevitable death. There are others feeling uncomfortable at the very thought. In this complexity, Subhashini had a well prepared and balanced mind. She even foresaw what would be the state of things after her death. Her drawing "Ideal End" is an interesting piece of art not attempted by any other artists in Karnataka.

The legs of the goddess Saraswati are embraced by the artist and has kept her head on the feet of the goddess indicating her surrender. In this picture she has shown, finished and half finished canvasses, Paint tubes, Palette, Brushes are all scattered on one side and on the other side, hammers, chisels, files, level finder and other implements needed of sculpture are all thrown in a disarray and some unfinished icons are standing.

At the bottom of Saraswati's feet a bundle of Palmyrah leaves with ancient script (old book form) written on it, is tottering. A musical instrument Veena is depicted as if it is waiting for a Veenas Masetro to play on it. Further, in the background, in a symbolic way the soul departing from the body is also shown. Though this picture is imaginary, in a

way it reflects the disappointment and pathetic condition of the artist in her last days. Subhashini had devoted her life for art, literature and social work. Due to strenous work, the strain was too much that she could not bear. She was forlorn and even those who had availed much needed assistance, did not provide succour to her. She was bed ridden. Yet even in that state, she created this work. This picture is a good composition with neat draughtsmanship and purity of lines.

**Siddartha's Journey**

This is a beautiful water colour painting using transparent water colours. Water colour painting compared to oil colour painting, is a difficult technique to master. It will be easier to fill large canvasses with oil colours, but even to paint a small picture on a paper with water colours needs dexterity and terrible practice. In this picture of small size, Subhashini has demonstrated her utmost mastery over this medium.

Siddartha's Journey, as a theme, depicts contradictions in life. While on one side, there is exhibition of princely splendour of wealth on the other side there is extreme poverty represented by an aged and famished beggar with a begging bowl leaning on a walking stick followed by a dog competing with the beggar. Subhashini has recreated the scene with utmost reality and fidelity. Anatomical perfection is quite visible. The prince is painted in exact proportions. He is driving a chariot with four horses. The chariot has intricate filigree work and the white horses are draped in colourful costumes. So also the Royal robes worn by the prince are colourful. The distances between Siddartha and the chariot driver have been correctly kept and other ratios

and proportions are exact. The beggar is typical and at first sight his status is revealed. Royal route has mansions in the background. The colours are used harmoniously. On the whole, this is an excellent composition having true perspective. This work must have taken lot of labour for its execution.

## Landscapes

Landscapes, sea scapes, Mountain scapes and such other natural sceneries and architectural marvels like temples, churches, etc., are subjects that have popular appeal and paintings of these are used for decorative purposes in homes, offices, hotels etc. These have a ready market. Particularly during British rule, in pre-independence India, the English men and others were fascinated with the panoramic scenes of India. They were ready buyers for landscapes and such other scenic paintings. Hence, many artists catered to these demands and earned handsome money. Subhashini painted landscapes, not with a view to sell them but for her own self satisfaction. Being familiar with Mysore, she was impressed by the beauty of the landmark, Chamundi Hills and its surrounding habitat. Particularly, she had fascination for the scenery at the foot hill of Chamundi. She has made several paintings of these scenes. She had an eye to see beauty. Sunrise and sunset, were her favourities since she loved to paint the technicolours. Mostly, she did, on the spot painting. Sometimes, she used to prepare sketches, which were finished as paintings with the assistance of colours notes made at the spot. Her paintings were so realistic and natural that they could be mistaken for photographs. She had the knack of showing the play of light

and shade in all her paintings of nature. This gave wonderful three dimensional effects for her pictures. Besides, she also painted river and temple scenes of her birth place, Nanjangud. Bathing Ghat scenes, show men and women in sitting, kneeling, standing postures. In those days, when colour photography, was still in its nascent stage it is the realistic paintings, that reflect the prevailing conditions of those times. Hence, these painting are valuable.

**Subhashini's Social Activities**

Subhashini's social status was such that she moved in elitist circles due to her father having a huge circle of friends amongst businessmen, government officials, Artists and writers, musicians etc. In a natural setting like this, she had to be a match in the elitist company. Otherwise, she would be a misfit. Being aware that she had no formal education, she tried to make good by self study in a serious manner. Meticulously and systematically, she started reading books on almost all subjects begining from primers to most advanced texts. Whenever she found any difficulty in grasping the subject, she did not hesitate to consult others having knowledge. She was an avid reader. She read epics, Ramayana, Mahabharatha, Puranas and other mythological works. Besides, She studied Vedas and Upanishads to have a philosophical grounding. To Keep abreast of times, she read regularly art journals and other magazines. All this study, Painting and sculpting kept her all the time busy leaving little time for rest. As a result of intensive study she became an erudite Scholar competent enough to be called on intellectual. Her vast knowledge of Indian philosophy and mythology was reflected in her paintings. Her vast knowledge was recognised and acknowledged by academic

institutions and also by the All India Radio. She had given number of talks on art subjects in All India Radio and lectured in several art Institutions.

Subhashini was a political worker, working at grass roots level, never aspiring for power, pelf or authority. She was a selfless volunteer in the congress party doing social work for the upliftment of women and the down trodden. In all this work she spent money from her pocket. This meant sacrifice. Her magnanimity dwindled the assets of the ancestral property she had inherited. She was an ardent nationalist. She participated in the freedom movement. Her regard for the National leaders is seen in her paintings of almost all top leaders like Mahatma Gandhi. Jawaharlal Nehru, Dr. Rajendra Prasad, Smt. Sarojini Naidu and so many others. Her social activities are separately listed in a concise form else where.

Despite her tremendous contribution in the fields of painting and drawing sculptures, social activities etc, the recognition by the state came belatedly at the fag end of her life. The state recognised her only after Acharya Chitrakala Bhavan bestowed M.T.V.Acharya award to her in 1999, She secured Karnataka Lalithakala Academy award in 1985. later in the year 2000, she was given state award, Since 1995-96 she was receiving annual solatium of Rs.3000 from All India Fine Arts Society being honoured as a veteran artist.

In the evening of her life she led a forlorn life. She had to live all alone with all her ailments. It is unfortunate that the artists community did not provide succor. Neither did the state do anything to help her. She had lot of self respect. As such she did not want to cringe before anyone for support. Many of her desires were unfulfilled. Her desire to convert

her Nanjangud home to a memorial and the Mysore home as a training centre for self employment of women did not materialise.

It is a tragic and pathetic case of a multifaceted woman who devoted all her life for the cause of art and did so many sacrifices for the good causes of others had to live in isolation. Subhashini Devi, though without formal education, proved that hard work and in depth study could attain highest standards in academic matters.

Subhashini Devi's sorrowful end should open the eyes of the State Government, Art Institutions and the General public to monitor the physical, Economic and other conditions of the senior artists and suomoto provide succour to then by financial and other means.

**Social Service Activities of Subhashini Devi**

- Executive Committee Member and patron of Mahila Vidya Peeta of Nanjangud since 1973 till her death.
- Member of Nanjangud Railway Consultative Committee – 1974 to 1988.
- Schools Development, Hospitals Adivisory, Police Advisory Committee's Member 1974 – 1984.
- J.S.S. Womens College Mysore, Scholarship Grants Committee Member.
- Mysore Dalvai High School Betterment Committee Member 1975-1990.

- Convenor Womens Wing, Mysore District Indian National Congress.
- Government Womens College, Mysore, Scholarship Grants Committee Member.
- Member, Mysore Dasara Exhibitions Committee 1947- 1970.
- Life Member Karnataka Chitrakala Parishat. E.C. Member.
- Member All India Fine Arts and Crafts Society.
- In 1963 Central Lalithakala Academy diary publishes an article on Subhashini.
- Conducts a training camp on casting and moulding paper cutting. Doll making at the behest of All India Handicrafts Development Board, New Delhi. She Herself gives demonstration on these crafts.
- On an invitation from Government of India, she attends the "Master Crafts Women" at work Demonstration" in the exhibition conducted by All India Handicrafts Development Board. She is chosen as the representative of Karnataka.
- 1-1-1984 monthly Honoroarium from the department of Kannada and Culture, Government of Karnataka.
- 1995-1996 Perpetual Annual Grant Rs.3000 from the All India Fine Arts and Crafts Society (being recognised as Veteran Artist)

- 1985 Karnataka State Lalithakala Academy Award.
- 1999 Sri. M.T.V. Acharya award.
- 2000 Karnataka State Rajyotsava Award.
- 21-09.2002 Expired.

**Excerpts from the Speeches of Subhashini Devi**


**Broadcast on All India Radio, Mysore Station**


- One should have a clear mind while painting a pleasant or sorrowful situation. Only a picture executed with a clear mind will have life in it. A Picture painted with a troubled mind may look nice but it will have no life in it. For painting concentration of mind is vital. (19-2-1954)
- Our works of art should reflect the culture of our times for the sake of the understanding of the future generations (19-2-1954)
- A calm atmosphere is required for the ideas to germinate.
- Art and Human values are rigidly bonded. This being so some people thoughtlessly says what connection we have with art.
- An Artist depicting scenes of Ramayana, Mahabharata, Mythological texts or historical events,

should delve deep into knowing those times, civilisation, Habitat, dresses, customs etc. If the artist is well versed with these, he or she will be able to portray the scene faithfully. Such a work will bring satisfaction, both for the artists as well as the viewer.

20-03-1951.







ಕರ್ನಾಟಕ ಲಲಿತಕಲಾ ಅಕಾಡೆಮಿ
KARNATAKA LALITHAKALA ACADEMY